ಸಂಪುಟ 01 | ಸಂಚಿಕೆ 48 | ಸೋಮವಾರ 12 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಯುವ ದಿನ (National Youth Day)

ರಾಷ್ಟ್ರೀಯ ಯುವ ದಿನವನ್ನು ಪ್ರತಿವರ್ಷ ಸ್ವಾಮಿ ವಿವೇಕಾನಂದರ ಜನ್ಮದಿನದಂದು (ಜನವರಿ 12) ಆಚರಿಸಲಾಗುತ್ತದೆ. ಯುವಜನರಲ್ಲಿ ಆತ್ಮವಿಶ್ವಾಸ, ಶಿಸ್ತು, ನಾಯಕತ್ವ ಮತ್ತು ರಾಷ್ಟ್ರಭಕ್ತಿಯನ್ನು ಬೆಳೆಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.ಸಮರ್ಪಿತವಾಗಿದೆ.

## ಸುಭಾಷಿತ

ಬಾಲ್ಯದಲ್ಲಿ ಕಲಿತದ್ದೇ ಬದುಕಿನಲ್ಲಿ ಉಳಿಯುವುದರಿಂದ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು.

-ಚೆನ್ನವೀರ ಕಣವಿ

## ಕರ್ನಾಟಕದಲ್ಲಿ ಜ 14 ರ ವರೆಗೆ ಜಾಸ್ತಿ ಚಳಿ ಸಾಧ್ಯತೆ

ನೈಜ್ಯ ದೆಸೆ ನ್ಯೂಸ್

ರಾಜ್ಯದಲ್ಲಿ ಜ.14ರ ವರೆಗೆ ಚಳಿಯ ವಾತಾವರಣ ಮುಂದುವರೆಯುವ ಸಾಧ್ಯತೆ ಇದೆ. ದಕ್ಷಿಣ ಕನ್ನಡದ ಸುಳ್ಯ, ಕಡಬ, ಪುತ್ತೂರು ತಾಲೂಕುಗಳಲ್ಲಿ ಅಲ್ಲಲ್ಲಿ ರಾತ್ರಿ ತುಂತುರು ಮಳೆಯ ಮುನ್ಸೂಚನೆ ಇದೆ. ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಒಂದೆರಡು ಕಡೆ ತುಂತುರು ಮಳೆಯ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.ಮಲೆನಾಡು ಜಿಲ್ಲೆಗಳಲ್ಲಿ ಬಿಸಿಲು ಹಾಗೂ ಮೋಡದ ವಾತಾವರಣ ಇರಲಿದ್ದು, ಕೊಡಗು, ಹಾಸನ ಜಿಲ್ಲೆಗಳ ಅಲ್ಲಲ್ಲಿ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ಕರಾವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಅಲ್ಲಲ್ಲಿ ಸಂಜೆ, ರಾತ್ರಿ ತುಂತುರು ಮಳೆಯ ಮುನ್ಸೂಚನೆ ಇದೆ. ಜ.14ರವರೆಗೆ ಈಗ ಇರುವ ವಾತಾವರಣ ಮುಂದುವರಿಯುವ ಸಾಧ್ಯತೆಯಿದೆ.ರಾಜ್ಯದ ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಬಾಗಲಕೋಟೆ, ಹಾವೇರಿ, ಗದಗ, ದಾವಣಗೆರೆ, ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು, ವಿಜಯಪುರ, ಕಲಬುರ್ಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ಬೆಳಿಗ್ಗೆಯಿಂದ ಮೋಡದ ವಾತಾವರಣದ ಮುನ್ಸೂಚನೆ ಇದೆ. ಹಾವೇರಿ, ಧಾರವಾಡ, ಬೆಳಗಾವಿ ಜಿಲ್ಲೆಗಳ ಒಂದೆರಡು ಕಡೆ ರಾತ್ರಿ ತುಂತುರು ಮಳೆಯ ಮುನ್ಸೂಚನೆ ಇದೆ. ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ ಜ.14ರಿಂದ ಚಳಿಯ ಪ್ರಮಾಣವು ಕಡಿಮೆಯಾಗುವ ಸೂಚನೆಗಳಿವೆ.14ರ ವರೆಗೆ ರಾಜ್ಯದ ದಕ್ಷಿಣ ಒಳನಾಡಿನ ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳ ಅಲ್ಲಲ್ಲಿ ಮೋಡದ ವಾತಾವರಣ ಇರಲಿದ್ದು, ಜ. 15ರಿಂದ ಒಣ ಹವೆ ಮುಂದುವರಿಯಲಿದೆ. ಚಳಿಯ ಪ್ರಮಾಣವು ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.ಕನಿಷ್ಠ ಉಷ್ಣಾಂಶದಲ್ಲಿ ಇಳಿಕೆ: ರವಿವಾರದಂದು ಹಾಸನದಲ್ಲಿ ಕನಿಷ್ಟ ಉಷ್ಣಾಂಶ 9 ಡಿಗ್ರಿ ಸೆಲ್ಸಿಯ[illegible]ಗೆ ಇಳಿಕೆಯಾಗಿದ್ದು, ಬೀದರ್ 10, ದಾವಣಗೆರೆ 11, ಹಾವೇರಿ ಮತ್ತು ವಿಜಯಪುರ 12, ಗದಗ, ಬೆಂಗಳೂರು, ಮೈಸೂರು ಜಿಲ್ಲೆಯಲ್ಲಿ ಕನಿಷ್ಟ ಉಷ್ಣಾಂಶ 16ಕ್ಕೆ ತಲುಪಿದೆ ಎಂದು ಹವಾಮಾನ ಇಲಾಖೆ ಹೇಳಿದೆ.



## ಮಸ್ಕಿ ಕ್ಷೇತ್ರದಲ್ಲಿ 457 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಸಚಿವ ಎನ್.ಎಸ್.ಬೋಸರಾಜರಿಂದ ಭೂಮಿ ಪೂಜೆ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ರಾಜ್ಯದಲ್ಲಿ ಇತ್ತೀಚಿಗೆ ಅಂತರ್ಜಲ ಮಟ್ಟ ಕುಸಿಯುತ್ತಿದ್ದು ಆದ್ದರಿಂದ ಅಂತರ್ಜಲ ಹೆಚ್ಚಿಸುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯಿಂದ ಚೆಕ್ ಡ್ಯಾಮ್, ಏತ ನೀರಾವರಿ ಯೋಜನೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ಹೇಳಿದರು.ಮಸ್ಕಿ ವಿಧಾನಸಭಾ ಕ್ಷೇತ್ರದ ಬಳಗಾನೂರಿನ ಹಳ್ಳದಲ್ಲಿ ನಾರಾಯಣ ನಗರ ಕ್ಯಾಂಪ್ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಸಣ್ಣ ನೀರಾವರಿ ಇಲಾಖೆಯಿಂದ 2 ಕೋಟಿ ಮತ್ತು ಸಾಗರ ಕ್ಯಾಂಪಿನ ರೈತರ ಜಮೀನುಗಳಿಗೆ ನೀರೋಧಗಿಸಲು 2 ಕೋಟಿ, ಮಾರಲದಿನ್ನಿ ತಾಂಡಕ್ಕೆ ಸಂಪರ್ಕ ಕಲ್ಪಿಸುವ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ-ಕ್ಕೆ 5 ಕೋಟಿ, ಕಡದರಾಳ ಗ್ರಾಮದಲ್ಲಿ ಕೆರೆ ತುಂಬಿಸುವ ಯೋಜನೆಗೆ 457 ಕೋಟಿ ರೂ.ಗಳ ಕಾಮಗಾ-ರಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ನಂತರ ಮಾತನಾಡಿದ ಅವರು ನಾರಾಯಣ ನಗರ ಕ್ಯಾಂಪಿನ ರೈತರ ಜಮೀನುಗಳ ಕೊನೆ ಭಾಗದಲ್ಲಿರುವದರಿಂದ ಸರಿಯಾಗಿ ಕಾಲುವೆ ನೀರು ಹರಿಯದೇ ಬೆಳೆಗಳು ಹಾಳಾಗುತ್ತಿರುದರಿಂದ ಹಳ್ಳದಿಂದ ನೀರನ್ನು ಲಿಫ್ಟ್ ಮಾಡಿ ಕಾಲುವೆಗಳ ಮೂಲಕ ಹರಿಸಲಾಗುತ್ತದೆ. ಅದೇ ರೀತಿಯಾಗಿ 65 ನಂಬರಿನ ಕಾಲುವೆ ಯೋಜನೆಯೂ ಟೆಂಡರ್ ಕರೆಯುವ ಹಂತದಲ್ಲಿ ಈಕಾಮಗಾ-ರಿಯನ್ನು ಅಧಿಕಾರಿಗಳು ಮುಂದೆ ನಿಂತುಕೊಂಡು ಕೆಲಸ ತೆಗೆದುಕೊಳ್ಳಬೇಕು.ಗುಣಮಟ್ಟದಿಂದ ಕಾಮಗಾರಿ ಮುಗಿಸಿ ಶೀಘ್ರವೇ ಯೋಜನೆ ಕಾರ್ಯರೂಪಕ್ಕೆ ತರಬೇಕು. ಅಧಿಕಾರಿಗಳು ಯಾವುದೇ ಕಾರಣ-ಕ್ಕೆ ಗುತ್ತಿಗೆದಾರರ ಜತೆ ಶಾಮೀಲಾಗುವಂಗಿಲ್ಲವೆಂದು ಸಣ್ಣ ನೀರಾವರಿ ಇಲಾಖೆಯ ಚೀಫ್ ಸೆಕ್ರೆಟರಿಗೆ ತಾಕೀತು ಮಾಡಿದರು.ಅಂತರ್ಜಲ ಹೆಚ್ಚಿಸುವ ಸಲುವಾಗಿ ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಎಲ್ಲ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ನಮ್ಮ ಇಲಾಖೆಯಿಂದ ಜಿಲ್ಲೆಯಲ್ಲಿ 1500 ಕೋಟಿ ವಿವಿಧ ಕಾಮಗಾರಿಗಳಿಗೆ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮಾಡಿಲಿದ್ದಾರೆ ಎಂದು ಹೇಳಿದರು. ರಾಜ್ಯದಲ್ಲಿ ಅಂತರ್ಜಲ ಕುಸಿಯುತ್ತಿರುವದರಿಂದ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಚೆಕ್ ಡ್ಯಾಂ, ಬ್ರಿಡ್ಜ್ ಕಂ ಬ್ಯಾರೇಜ್ ಮತ್ತು ಕೆರೆಗಳನ್ನು ತುಂಬಿಸಲು ಸಣ್ಣ ನೀರಾವರಿಇಲಾಖೆಯಿಂದ ಮುಂದಾಗಿದೆ ಎಂದು ಹೇಳಿದರು. ನಂತರ ಶಾಸಕ ಆರ್.ಬಸನಗೌಡ ತುರವಿಹಾಳ ಮಾತನಾಡಿ ಕ್ಷೇತ್ರದ ಒಣ ಬೇಸಾಯ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಎಸ್.ಸಿ ಮತ್ತು ಎಸ್.ಟಿ ಜನಾಂಗದ ಬಡ ರೈತರಿಗೆ ಈಗಾಗಲೇ 98 ಬೋರ್‌ವೆಲ್ ಕೋರೆಯಸಿಲಾಗಿದೆ. ಕೊನೆ ಭಾಗದ ರೈತರಿಗೆ ನಿರೋದಗಿಸುವ ಸಲುವಾಗಿ ಚೆಕ್‌ಡ್ಯಾಂ ನಿರ್ಮಿಸಿ ಚೆಕ್ ಡ್ಯಾಂನಿಂದ ರೈತರ ಹೊಲಗಳಿಗೆ ನೀರು ಹರಿಸಲಾಗುತ್ತದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಹನುಮಂತಪ್ಪ ಮುದ್ದಾಪೂರು, ವೆಂಕಟರಡ್ಡಿ ಹಾಲಾಪೂರು, ಅಂ-ದಾನಪ್ಪ ಗುಂಡಳ್ಳಿ, ಬಸನಗೌಡ ಪಾಟೀಲ್ ಸೇ-ರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರಿದ್ದರು.

## ಬೆಳ್ಳಂಬೆಳಗ್ಗೆ ಜ್ಞಾನ ಹಂಚುವ ಕೈಗಳಿಗೆ ಭದ್ರತೆ ಎಲ್ಲಿದೆ?



ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಊರು ಇನ್ನೂ ನಿದ್ರೆಯ ಮಂಪ-ರಿನಲ್ಲಿರುವಾಗಲೇ, ಜಗತ್ತಿನ ಸುದ್ದಿಯನ್ನು ನಿಮ್ಮ ಮನೆಯ ಅಂಗಳಕ್ಕೆ ತಲುಪಿಸಲು ಹೊರಡುವ ಈ ವ್ಯಕ್ತಿಯನ್ನು ನೋಡಿ. ಇವರೇ ಬಳಗಾನೂ-ರಿನ ರಾಜಶೇಖರ್ ನಾಗಲೀಕರ್. ಚಳಿ ಇರಲಿ, ಗಾಳಿ ಇರಲಿ ಅಥವಾ ಸುರಿಯುವ ಮಳೆಯೇ ಇರಲಿ... ಕಳೆದ 36 ವರ್ಷಗಳಿಂದ ಇವರ ಕಾಯಕ ನಿಂತಿಲ್ಲ! ಹಿರಿಯರು ಹೇಳುತ್ತಾರೆ,ಶ್ರದ್ಧೆ ಮತ್ತು ಶ್ರಮವಿದ್ದರೆ ಯಾವುದೇ ಕೆಲಸ ಹೊರೆಯಾಗದು' ಎಂದು. ರಾಜಶೇಖರ್ ಅವರು ಅದನ್ನು ನಿಜವಾಗಿಸಿ ತೋರಿಸಿದ್ದಾರೆ. ಕೇವಲ ದಿನಪತ್ರಿಕೆಗಳನ್ನು ಹಂಚುತ್ತಲೇ ಒಂದು ಸುಂದರ ಬದುಕನ್ನು ಕಟ್ಟಿಕೊಂಡಿದ್ದಾರೆ,ಕುಟುಂಬವನ್ನು ನಿರ್ವಹಿಸಿದ್ದಾರೆ. ಸಮಾಜಕ್ಕೆ ಇವರೊಂದು ದೊಡ್ಡ ಮಾದರಿ. ಆದ-'ರೆ ಈ ಕಥೆಯ ಇನ್ನೊಂದು ಮಗ್ಗುಲು ತುಂಬಾ ನೋವಿನದ್ದು. ಪತ್ರಿಕೆಗಳು ದೇಶದ ನೊಂದವರ, ಬೆಂದವರ ಧ್ವನಿಯಾಗುತ್ತವೆ. ಸರ್ಕಾರದ ಗಮನ ಸೆಳೆದು ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸುತ್ತವೆ. ಆದರೆ, ಆ ಪತ್ರಿಕೆಗಳನ್ನು ಜನರ ಮನೆ-ಮನಕ್ಕೆ ತಲುಪಿಸುವ ಈ 'ಸುದ್ದಿ ಹರಿಕಾರರ' ಸ್ಥಿತಿ ಹೇಗಿದೆ ಗೊತ್ತಾ? ಪತ್ರಿಕಾ ಮಾಲಕರು ಮತ್ತು ಸಂಪಾದಕರು ತಮ್ಮ ಪತ್ರಿಕೆಯ ಪ್ರಸಾರಕ್ಕಾಗಿ ಹಗಲಿರುಳು ಶ್ರಮಿಸುವ ಈ ವಿತರಕರಿಗೆ ಕನಿಷ್ಠ ಭದ್ರತೆಯನ್ನೂ ನೀಡಿಲ್ಲ ಎನ್ನುವುದು ವಿಪರ್ಯಾಸ! ಇವರಿಗೆ ಜೀವ ವಿಮೆ ಇಲ್ಲ, ಆರೋಗ್ಯ ವಿಮೆ ಇಲ್ಲ, ಯಾವುದೇ ಸಾಮಾಜಿ-ಕ ಭದ್ರತೆಯೂ ಇಲ್ಲ. ಪತ್ರಿಕೆ ಪ್ರಕಟಿಸುವುದು ಎಷ್ಟು ಮುಖ್ಯವೋ, ಅದು ಓದುಗರ ಕೈ ಸೇರುವುದು ಅಷ್ಟೇ ಮುಖ್ಯ. ಅಂತಹ ಕೆಲಸ ಮಾಡುವವರಿಗೆ ಸೌಲಭ್ಯ ನೀಡದಿರುವುದು ನಿಜಕ್ಕೂ 'ದೀಪದ ಬುಡದಲ್ಲೇ ಕತ್ತಲು' ಎಂಬಂತಿದೆ. ಬಳಗಾನೂರಿನ ಈ ಹಿರಿಯ ಚೇತನ ರಾಜಶೇಖರ್ ನಾಗಲೀಕರ್ ಅವರ 36 ವರ್ಷಗಳ ಸೇವೆಗೆ ಗೌರವ ಸಿಗುವುದು ಯಾವಾಗ? ಪತ್ರಿಕಾ ಸಂಸ್ಥೆಗಳು ಮತ್ತು ಸರ್ಕಾರ ಇಂತಹ ಪ್ರಾಮಾಣಿಕ ಕೆಲಸಗಾರರತ್ತ ಗಮನ ಹರಿಸುತ್ತದೆಯೇ? ಈ ಧ್ವನಿ ಮರೆಯಾಗಬಾರದು.



## ಬೆಳೆ ಹಾನಿ ಪರಿಹಾರ ನೀಡಲು ಒತ್ತಾಯಿಸಿ ಉಪವಿಭಾಗಾಧಿಕಾರಿಗೆ ಮನವಿ




ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು : ಜಿಲ್ಲೆಯಾದ್ಯಂತ ಸತತವಾಗಿ ಸುರಿದ ಮಳೆಯಿಂದಾಗಿ ತೋಟಗಾರಿಕೆ, ಒಣ ಬೇಸಾಯದ ಬೆಳೆಗಳು ಹಾನಿಯಾಗಿದ್ದು, ಕೂಡಲೇ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ರೈತ ಸಂಘದ ಪದಾಧಿಕಾರಿಗಳು ಉಪವಿಭಾಗಾಧಿಕಾರಿಗೆ ಶುಕ್ರವಾರ ಮನವಿ ಸಲ್ಲಿಸಿದರು.'ತೋಟಗಾರಿಕೆ ಬೆಳೆಗಳು ಸೇರಿದಂತೆ ತೊಗರಿ, ಹತ್ತಿ ಸಂಪೂರ್ಣ ನಾಶವಾಗಿದೆ.ಲಿಂಗಸುಗೂರು ಮತ್ತು ಮಸ್ಕಿ ತಾಲ್ಲೂಕಿನ ಕೆಲವೇ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಜಮಾ ಆಗಿದೆ. ಇನ್ನೂ ಬಹಳಷ್ಟು ರೈತರಿಗೆ ಪರಿಹಾರ ಬಂದಿಲ್ಲ. ವಿಮಾ ಹಣ ಸಹ ಜಮಾ ಆಗಿಲ್ಲ. ಕೂಡಲೇ ರೈತರಿಗೆ ಪರಿಹಾರದ ಹಣ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.'ಲಿಂಗಸುಗೂರು, ಮಸ್ಕಿ ಎಪಿಎಂಸಿಯಲ್ಲಿ ಪ್ರತಿ ವರ್ಷ ಧಾನ್ಯಗಳನ್ನು ಗೋಣಿ ಚೀಲಗಳಲ್ಲಿ ತೂಕ ಮಾಡುತ್ತಿದ್ದರು. ಆದ-'ರೆ, ಈಗ ಪ್ಲಾಸ್ಟಿಕ್ ಚೀಲಗಳಲ್ಲಿ ತೂಕ ಮಾಡಿ ಪ್ರತಿ ಚೀಲಕ್ಕೆ 1 ಕೆ.ಜಿ ಸೂಟ್ ಮುರಿಯುತ್ತಿದ್ದಾರೆ. ಇದನ್ನು ನಿಲ್ಲಿಸಿ ಗೋಣಿ ಚೀಲಗಳಲ್ಲಿ ಧಾನ್ಯಗಳನ್ನು ತೂಕ ಮಾಡಬೇಕು' ಎಂದು ಆಗ್ರಹಿಸಿದರು.ಸಂಘದ ತಾಲ್ಲೂಕು ಅಧ್ಯಕ್ಷ ಮಲ್ಲಣ್ಣ ಗೌಡೂರು, ಮಸ್ಕಿ ಘಟಕದ ಅಧ್ಯಕ್ಷ ಬಸನಗೌಡ ಮಟ್ಟೂರು, ಅಮರಣ್ಣ ಅರಳಳ್ಳಿ, ನಿಂಗಪ್ಪ ಗೌಡನಬಾವಿ, ಕುಮಾರಸ್ವಾಮಿ, ಚಂದಾವಲಿಸಾಬ ಮುದಗಲ್, ಬಾಗನಗೌಡ ಹಟ್ಟಿ, ಹುಸೇನ ನಾಯಕ ಮುದಗಲ್, ವೆಂಕೋಬ ನಾಯಕ, ಕಾಸಿಮ್ ಸಾಬ ಮುದಗಲ್, ಈರಣ್ಣ ಗುಡಿಹಾಳ, ನಾಗರಾಜ ಗುಡಿಹಾಳ, ಯಂಕಣ್ಣ ಗುಡಿಹಾಳ ಹಾಜರಿದ್ದರು.

## ಯುವಶಕ್ತಿಯ ಕೈಯಲ್ಲಿ ಭಾರತದ ಭವಿಷ್ಯ – ರಾಘವೇಂದ್ರ ಸುಂಕೇಶ್ವರ ಉಪನ್ಯಾಸಕರು. ಕಲ್ಮಠ ಪದವಿ ಮಹಾವಿದ್ಯಾಲಯ

ನೈಜ್ಯ ದೆಸೆ ನ್ಯೂಸ್

ಇಂದು ನಾವು ಪ್ರತಿ ವರ್ಷ ಜನವರಿ 12ರಂದು ರಾಷ್ಟ್ರೀಯ ಯುವ ದಿನ ಆಚರಿಸಲಾಗುತ್ತದೆ. ಇದು ಕೇವಲ ಒಂದು ದಿನದ ಆಚರಣೆಯಲ್ಲಿ ಯುವಶಕ್ತಿ ಜಾಗೃತಿ ದಿನ ಈ ದಿನವನ್ನು ನಾವು ಮಹಾನ್ ಚಿಂತಕ ಮಹಾನ್ ತತ್ವಜ್ಞಾನಿ ಯುಗಪುರುಷ ದೇಶ ಭಕ್ತ ಯುವಕರಿಗೆ ಪ್ರೇರಣೆ ದೀಪವಾಗಿರುವ ಸ್ವಾಮಿ ವಿವೇಕಾನಂದರ ಜನ್ಮದಿನದ ನೆನಪಿಗಾಗಿ ಆಚರಿಸುತ್ತೇವೆ. ಯಾವುದೇ ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಶಕ್ತಿ ಯುವಶರಲ್ಲಿದೆ ಯುವಕರು ಶಕ್ತಿಶಾಲಿಗಳು ಚೈತನ್ಯ ಬರಿತರು ಹೊಸ ಆಲೋಚನೆಗಳನ್ನು ಹೊಂದಿರುವವರು ಅದ-ರಿಂದ ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿಯ ಪಾತ್ರ ಅತ್ಯಂತ ದೊಡ್ಡದು. ಇಂದಿನ ಯುವಕರು ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿ ಹೊಂದಿದ್ದಾರೆ ಯುವಶಕ್ತಿ ಶಿಸ್ತು ಮತ್ತು ಮೌಲ್ಯಗಳಿಂದ ಬೆಳೆದರೆ ನಾಯಕತ್ವ ಸಹರವಾಗಿ ಮೂಡುತ್ತದೆ ಯುವಕರು ಶಿಕ್ಷಣದ ಜೊತೆಗೆ ನಮಾಜದ ಹೊಣೆಗಾ-ರಿಕೆಯನ್ನು ಅರಿಯಬೇಕು ಇಂದಿನ ಶ್ರಮವೇ ನಾಳೆಯ ಯಶಸ್ವಿಗೆ ದಾರಿ ಮಾಡಿಕೊಡುತ್ತದೆ ಆದ್ದರಿಂದ ಯುವಕರು ಜವಾಬ್ದಾರಿ ಹಿತವಾಗಿ ಬದುಕಿದರೆ ದೇಶದ ಪ್ರಗತಿಯುತ್ತ ಸಾಗುತ್ತದೆ. ಯುವಕರಲ್ಲಿ ದೈಹಿಕ ಶಕ್ತಿ ಮಾನಸಿಕ ಸಾಮರ್ಥ್ಯ ಸೃಜನಶೀಲತೆ ಹೆಚ್ಚಿರುತ್ತದೆ ಆ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಬಳಸಿದರೆ ದೇಶದ ಪ್ರಗತಿ ವೇಗವಾಗುತ್ತದೆ ಶಿಕ್ಷಣದ ಮೂಲಕ ಯುವಕರು ಜ್ಞಾನವಂತರಾಗಿ ಕೌಶಲ್ಯಗಳನ್ನು ಬಳಸಿಕೊಂಡು ನಮಾಜದ ಅಭಿವೃದ್ಧಿಗೆ ಕೈಜೋಡಿಸಬಹುದು ಯುವಕರು ಎಂದರೆ ಕೇವಲ ವಯಸ್ಸಿನ ಅಂತವಲ್ಲ ಯುವಕರೆಂದರೆ ಶಕ್ತಿ ಉತ್ಸಾಹ. ಧೈರ್ಯ. ನವ ಚಿಂತನೆ ಮತ್ತು ಬದಲಾವಣೆಯ ಸಂಕೇತ ಎಂದರ್ಥ ಆದರೆ ಇಂದಿನ ಯುವ ಜನಾಂಗವು ಎದುರಿಸುತ್ತಿರುವ ಸವಾಲುಗಳು ಕಡಿಮೆಯಲ್ಲ ಅತಿಯಾದ ಮೊಬೈಲ್ ಬಳಕೆ. ನಮಯ ದುರುಪಯೋಗ, ಗುರಿಯ ಕೊರತೆ ನೈತಿ-ಕ ಮೌಲ್ಯಗಳ ಹಿನ್ನಡೆ ಇವೆಲ್ಲವೂ ಯುವಶಕ್ತಿಯನ್ನು ಕುಗ್ಗಿಸುತ್ತವೆ. ಇದ-ರಿಂದ ಹೊರಬರಲು ಯುವಕರು ಕಿಸ್ತು ಪರಿಶ್ರಮ ಮತ್ತು ಆತ್ಮವಿಶ್ವಾಸವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯುವಕರು ಶಿಕ್ಷಣದ ಜೊತೆಗೆ ಮೌಲ್ಯಗಳನ್ನು ಉದ್ಯೋಗದ ಜೊತೆಗೆ ಸೇವಾ ಭಾವನೆಯನ್ನು ಯಶಸ್ವಿ ಜೊತೆಗೆ ವಿನಯವನ್ನು ಬೆಳೆಸಿಕೊಳ್ಳಬೇಕು. ಒಬ್ಬ ಯುವಕ ತನ್ನ ಜೀವನವನ್ನು ಉತ್ತಮಗೊಳಿಸಿಕೊಂಡರೆ ಅವನ ಕುಟುಂಬ ಬೆಳೆಯುತ್ತದೆ ಕುಟುಂಬ ಬೆಳೆಯುತ್ತಿದ್ದಂತೆ ಸಮಾಜ ಬೆಳೆಯುತ್ತದೆ ಸಮಾಜ ಬೆಳೆಯುತ್ತಿದ್ದಂತೆ ದೇಶ ಬಲಿಷ್ಠವಾಗುತ್ತದೆ. ಇಂದಿನ ಯುವಕರು ತಮ್ಮ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಬಳಸಿದರೆ ನಾಳೆಯೇ ಶ್ರೇಷ್ಠ ನಾಯಕರಾಗುತ್ತಾರೆ ಯುವಶಕ್ತಿಯಿಂದಲೇ ದೇಶದ ಪ್ರಗತಿ ಸಾಧ್ಯ. ಯುವಕರು ತಮ್ಮ ವ್ಯಕ್ತಿತ್ವದ ನಡೆ ಮತ್ತು ಸೇವಾ ಭಾವನೆಯ ಮೂಲಕ ಸಮಾಜಕ್ಕೆ ಆದರ್ಶ ರಾಗಬಹುದು ಯುವ ಶಕ್ತಿ ಸಕರಾತ್ಮಕ ದಿಕ್ಕಿನಲ್ಲಿ ಸಾಗಿದಾಗ ಮಾತ್ರ ನಮ್ಮ ಭಾರತ ಮತ್ತು



ಮೌಲ್ಯಯುತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ*ರಾಷ್ಟ್ರೀಯ ಯುವ ದಿನದ ಮಹತ್ವ ರಾಷ್ಟ್ರೀಯ ಯುವ ದಿನವನ್ನು ಆಚರಿಸುವ ಮುಖ್ಯ ಉದ್ದೇಶವೇನೆಂದರೆ ಸ್ವಾಮಿ ವಿವೇಕಾನಂದರ ಚಿಂತನೆಗಳು ಮೌಲ್ಯಗಳು ಮತ್ತು ಆದರ್ಶಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಅವರ ಆಲೋಚನೆಗಳ ಬಗ್ಗೆ ಯುವ ಜನತೆಗೆತಿಳಿಸಿ ಅವರು ದೇಶದ ಪ್ರಗತಿಗೆ ಕೊಡುಗೆ ನೀಡಲು ಪ್ರೇರೇಪಿಸುವುದು. ಯುವಕರಿಗೆ ಸ್ಫೂರ್ತಿ ನೀಡುವುದಾಗಿದೆ. ಯುವಕರು ಈ ದೇಶದ ಆಸ್ತಿ ಅಥವಾ ಸಂಪತ್ತು ಎನ್ನಲಾಗುತ್ತದೆ ಯುವಕರು ದೇಶ ಕಟ್ಟುವ ಕೆಲಸ ಮಾಡಬೇಕು ಎಂಬುವುದು ನಮ್ಮ ಇಂದಿನ ತಲೆಮಾ-ರಿನವರ ಆಶಯ ಒಟ್ಟಾರೆ ಯುವ ಜನರಿಂದ ಪರಿವರ್ತನೆ ಸಾಧ್ಯ ದೇಶದ ನಾಳೆಯ ಸುಭದ್ರ ಭವಿಷ್ಯಕ್ಕೆ ಇಂದಿನ ಯುವ ಜನರೇ ಬುನಾದಿ ಸ್ವಾಮಿ ವಿವೇಕಾನಂದರ ನೀಡಿದ ಸಂದೇಶ ಯುವಜನತೆಗೆ ನೀಡಿದ ಅವರ ಕರೆ ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬುವುದು ಸರ್ವಕಾಲಕ್ಕೂ ನೆನೆಯುವ ಯುವಕರನ್ನು ಒಳ್ಳೆಯ ಕೆಲಸಗಳಿಗೆ ಅಥವಾ ದೇಶ ಕಟ್ಟುವ ಕಾಯಕದಲ್ಲಿ ತೊಡಗುವಂತೆ ಕರೆ ನೀಡಿದರು. ಇಂದು ನಾವು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ರಾಷ್ಟ್ರೀಯ ಯುವ ದಿನವನ್ನು ಆಚರಣೆ ಸಾರ್ಥಕತೆ ದೊರೆಯುತ್ತದೆ. ಯುವಕರೇ ನೀವೇ ದೇಶದ ಭವಿಷ್ಯ ನಿಮ್ಮ ಕೈಯಲ್ಲೇ ನಾಳೆಯ ಭಾರತ

## ಸಾಹಿತ್ಯ ಸಿಂಚನ

ಶ್ರೀ ಗುರು ಪುಟ್ಟರಾಜ...

ಗಾನಗಂಧರ್ವ ಶ್ರೀ ಗುರು ಪುಟ್ಟರಾಜ
ಅಂದರ ಬಾಳಿನ ರಾಜ
ಸರ್ವ ಅಂದರ ಬಾಳು ನಿಮ್ಮ ಕೈಯಲ್ಲಿದೆ ತಂದೆ
ಶ್ರೀ ಗುರು ಪುಟ್ಟರಾಜರೇ
ಗುರುವೇ ನಿಮಗೆ ನಮನ
ನಮನ ನಿಮಗೆ ನನ್ನ ನಮನ

ಅಂದರೆಲ್ಲರೂ ನಿಮ್ಮ ಮಕ್ಕಳೆಂದು
ಮುಂದೆ ಬಂದ ಅಂದರೆಲ್ಲ ನನ್ನ ಮಕ್ಕಳೆಂದು
ಹೇಳಿರೋ ರಾಜ ಶ್ರೀ ಗುರು ಪುಟ್ಟರಾಜರೇ
ಗುರುವೇ ನಿಮಗೆ ನಮನ
ನಮನ ನಿಮಗೆ ನನ್ನ ನಮನ

ಅಂದರಿಗೆಲ್ಲ ಚಂದ ಬಾಳು ಕೊಟ್ಟೀರಿ
ಇಂದು ಗದಗಿನಲ್ಲಿ ಅಂದ ಚಂದದ ಗುಡಿ ಕಟ್ಟಿರಿ
ಅಂದ ಅನಾಥರ ಕಾಳಜಿಯಲ್ಲಿ ಜೀವನ ಕಂಡೀರಿ ಶ್ರೀ ಗುರು ಪುಟ್ಟರಾಜರೇ
ಗುರುವೇ ನಿಮಗೆ ನಮನ
ನಮನ ನಿಮಗೆ ನನ್ನ ನಮನ

ಎಸ್. ದುರಗಪ್ಪ. ಕುಷ್ಟಗಿ.

# 'ಪ್ರಬುದ್ಧ ಅಕಾಡೆಮಿ' ಉದ್ಘಾಟಿಸಿದ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಸಚಿವ ಶರಣ ಪ್ರಕಾಶ್ ಪಾಟೀಲ್




■ ನೈಜ್ಯ ದೇಸೆ ನ್ಯೂಸ್

ನಗರದ ಹೊರವಲಯದ ಜೇವರ್ಗಿ ರಸ್ತೆಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯಲ್ಲಿ ನಿರ್ಮಿಸಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ 'ಪ್ರಬುದ್ಧ ಅಕಾಡೆಮಿ'ಯನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಭಾನುವಾರ ಉದ್ಘಾಟಿಸಿದರು.ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ಯುಪಿ–ಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂ–ಗ್, ಪೊಲೀಸ್ ಮತ್ತು ಇತರ ಸರ್ಕಾರಿ ನೇಮಕಾತಿಗಳಿಗೆ ಅನುಕೂಲ ಕಲ್ಪಿಸಲು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಈ ಸ್ಪರ್ಧಾತ್ಮಕ ಪರೀಕ್ಷಾಪೂರ್ವ ತರಬೇತಿ ಕೇಂದ್ರವನ್ನು ನಿರ್ಮಿಸಲಾಗಿದೆ.ನಾಲ್ಕು 1,000 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಸಾಮರ್ಥ್ಯ ಹೊಂದಿದ್ದು, ಸದ್ಯಕ್ಕೆ 500 ಅಭ್ಯರ್ಥಿಗಳಿಗೆ ತರಬೇತಿ ನೀಡಲು ತಯಾರಿ ಮಾಡಿಕೊಳ್ಳಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ಪ್ರವೇಶ ಪರೀಕ್ಷೆ ನಡೆಸಿ, ಅರ್ಹತೆ ಆಧಾರದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.ರಾಜ್ಯ ಸರ್ಕಾರದಿಂದ ಯುಪಿಎಸ್‌ಸಿ, ಕೆಪಿಎಸ್‌ಸಿ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷಾಪೂರ್ವ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಿರುವುದು ಇದೇ ಮೊದಲು. ತರಬೇತಿ ಕೇಂದ್ರ ಸುಮಾರು 10,449.35 ಚ.ಮೀ ವಿಸ್ತೀರ್ಣ ಹೊಂದಿದೆ. ಸಮಾಜ ಕಲ್ಯಾಣ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಒಟ್ಟು □29.52 ಕೋಟಿ ವೆಚ್ಚದಲ್ಲಿ ಅಕಾಡೆಮಿ ನಿರ್ಮಾಣವಾಗಿದೆ.ಸೌಲಭ್ಯಗಳೇನು?: ಮೂರು ಅಂತಸ್ತು ಇರುವ (ಜಿ+3) ಕಟ್ಟಡದಲ್ಲಿ ನಾಲ್ಕು ಸ್ಮಾರ್ಟ್ ತರಗತಿ ಕೊಠಡಿಗಳು, ಡಿಜಿಟಲ್ ಪ್ರಸ್ತುತಿಗೆ ವ್ಯವಸ್ಥೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವಶ್ಯ ಇರುವ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯ, ಡಿಜಿಟಲ್ ಲೈಬ್ರರಿ, ಆನ್‌ಲೈನ್ ಪರೀಕ್ಷೆಗಳಿಗಾಗಿ ಕಂಪ್ಯೂಟರ್ ಲ್ಯಾಬ್, ಅಣಕು ಪರೀಕ್ಷಾ ಸಭಾಂಗಣಗಳು, ಮಾರ್ಗದರ್ಶನ ಮತ್ತು ಸಮಾಲೋಚನಾ ಕೊಠಡಿಗಳು ಇವೆ. ಸಚಿವ ಡಾ.ಶರಣಪ್ರಕಾಶ ಪಾಟೀಲ, ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಂಘರ್ಷ ನಿಯಂತ್ರಣಕ್ಕೆ ಮುಂಜಾಗ್ರತೆ ಅವಶ್ಯ: ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ

■ ನೈಜ್ಯ ದೇಸೆ ನ್ಯೂಸ್

'ಜಿಲ್ಲೆಯಲ್ಲಿ ಮಾನವ–ಚಿರತೆ ಸಂಘರ್ಷ ಪ್ರಸ್ತುತ ವ್ಯಾಪಕವಾಗಿಲ್ಲದಿದ್ದರೂ, ಮುಂಚೂಣಿ ಅರಣ್ಯ ಸಿಬ್ಬಂದಿಯ ಸಾಮರ್ಥ್ಯ ಬಲಪಡಿಸುವ ಮೂಲಕ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದು ಮುಖ್ಯವಾಗಿದೆ' ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಹೇಳಿದರು.ಅರಣ್ಯ ಇಲಾಖೆ, ಹೊಳಮತ್ತಿ ನೇಚರ್ ಫೌಂಡೇಶನ್ ಸಹಭಾಗಿತ್ವದಲ್ಲಿ ತಾಲ್ಲೂಕಿನ ಬಿಂಕದಕಟ್ಟಿ ಮೃಗಾಲಯದಲ್ಲಿ ನಡೆದ ಮಾನವ– ಚಿರತೆ ಸಂಘರ್ಷ ನಿರ್ವಹಣೆ ವಿಷಯ ಕುರಿತಾದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.'ಆವಾಸಸ್ಥಾನ ನಷ್ಟ, ನಗರ ಪ್ರದೇಶಗಳ ವಿಸ್ತರಣೆ ಮತ್ತು ಆಹಾರದ ಕೊರತೆಯಿಂದಾಗಿ ರಾಜ್ಯದಲ್ಲಿ ಮಾನವ–ಚಿರತೆ ಸಂಘರ್ಷ ಹೆಚ್ಚುತ್ತಿದೆ. ಕರ್ನಾಟಕದಲ್ಲಿ 2 ಲಕ್ಷ ಎಕರೆಗಳಿಗೂ ಹೆಚ್ಚು ಅರಣ್ಯ ಭೂಮಿ ಅತಿಕ್ರಮಣದಿಂದ ವನ್ಯಜೀವಿಗಳು ಆಹಾರ, ನೀರು ಮತ್ತು ಸ್ಥಳಕ್ಕಾಗಿ ಹೊರಬರುವುದು ಆಶ್ಚರ್ಯವೇನಿಲ್ಲ' ಎಂದರು.'ರಾಜ್ಯದ ಉಳಿದ ಭಾಗಗಳಂತೆ ಉತ್ತರ ಕರ್ನಾಟಕದಲ್ಲೂ ಆವಾಸಸ್ಥಾನ ನಷ್ಟ ಮತ್ತು ಮಾನವ ಪ್ರದೇಶಗಳ ಬಳಿ ಚಿರತೆಗಳ ಉಪಸ್ಥಿತಿ ಹೆಚ್ಚುತ್ತಿದೆ. ಇದರಿಂದಾಗಿ ಬೀದಿನಾಯಿಗಳು ಮತ್ತು ಜಾನುವಾರುಗಳಂತಹ ಸುಲಭ ಬೇಟೆಯಿಂದ ದಾಳಿ, ಜಾನುವಾರುಗಳ ನಾಶ ಮತ್ತು ಮಾನವ ಗಾಯಗಳು, ಸಾವುಗಳಿಗೆ ಕಾರಣವಾಗುತ್ತಿದೆ. ಚಿರತೆಗಳು ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ, ಬದಲಾಗಿ ಅವು ಬೀದಿನಾಯಿ ಅಥವಾ ಜಾನುವಾರುಗಳನ್ನು ಹುಡುಕಿಕೊಂಡು ಬರುತ್ತವೆ. ಮಾನವರು ಚಿರತೆಯ ಬೇಟೆಯಲ್ಲ' ಎಂದರು.ಗದಗ ಡಿಸಿಎಫ್ ಸಂತೋಷ್ ಕುಮಾರ್, ಗದಗ ಮೃಗಾಲಯದ ಆರ್‌ಎಫ್‌ಒ ಸ್ನೇಹಾ ಕೊಪ್ಪಳ, ಆರ್‌ಎಫ್‌ಒಗಳಾದ ರಾಮಪ್ಪ ಪೂಜಾರ, ಮಂಜುನಾಥ ಮೇಗಲಮನಿ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.ವಸಂತ್ ರೆಡ್ಡಿ ಸಿಸಿಎಫ್ ಧಾರವಾಡ ವೃತ್ತಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗೆ ನಾಯಕತ್ವ ಮತ್ತು ಸಾಮರ್ಥ್ಯ ವೃದ್ಧಿಗೆ ಸಂಜಯ್ ಗುಬ್ಬಿ ಮತ್ತು ಅವರ ತಂಡದಿಂದ ಚಿರತೆ–ಮಾನವ ಸಂಘರ್ಷ ನಿರ್ವಹಣಾ ಕೌಶಲ ತರಬೇತಿ ನೀಡಲಾಗಿದೆ ಮಂಜುನಾಥ ಎಸ್. ನಾಯಕ ಜೀವವೈವಿಧ್ಯ ಸಂಶೋಧಕಎಲ್ಲಾ ಪರಿಸರಕ್ಕೂ ಹೊಂದಿಕೊಂಡು ಬದುಕುವ ಏಕೈಕಿ ಮಾಂಸಹಾರಿ ವನ್ಯಜೀವಿ ಚಿರತೆ. ಅರಣ್ಯ ಇಲಾಖೆಯು ಸಾರ್ವಜನಿಕರು ಮತ್ತು ರೈತರಿಗೆ ಜಾಗೃತಿ ಮೂಡಿಸುವುದರ ಮೂಲಕ ಮಾನವ– ವನ್ಯಜೀವಿ ಸಂಘರ್ಷಗಳನ್ನು ನಿಯಂತ್ರಿಸಬಹುದು




# ನವೀನ, ಕೌಶಲಾಧರಿತ ಸಂಶೋಧನೆ ಅಗತ್ಯ: ಪ್ರೊ.ಗುಡಿ




■ ನೈಜ್ಯ ದೇಸೆ ನ್ಯೂಸ್

ಬಾಗಲಕೋಟೆ : ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಎಂಜಿನಿಯ–ರಿಂಗ್ ಪದವೀಧರರ ನವೀನ, ಕೌಶಲಾಧರಿತ ಸಂಶೋಧನೆ ಅಗತ್ಯವಾಗಿದೆ ಎಂದು ಮುಂಬೈ ಐಐಟಿಯ ಉಪನಿರ್ದೇಶಕ ಪ್ರೊ.ರವೀಂದ್ರ ಗುಡಿ ಹೇಳಿದರು.ಬಿವಿವಿ ಸಂಘದ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ನಡೆದ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ತಂತ್ರಜ್ಞಾನದ ಸಹಾಯದಿಂದ ಗ್ರಾಮೀಣ ಪ್ರದೇಶದ ಜನರ ಆರೋಗ್ಯ, ನೈರ್ಮಲ್ಯ, ನೀರಿನ ಗುಣಮಟ್ಟ ಸುಧಾರಿಸಿ ಉತ್ತಮ ಜೀವನಮಟ್ಟ ಕಲ್ಪಿಸುವಂತೆ ಮಾಡಬೇಕು ಎಂದರು.ಪ್ರಧಾನಮಂತ್ರಿಗಳ ವಿಕಸಿತ ಭಾರತದ ಪರಿಕಲ್ಪನೆ ಧ್ಯೇಯದಲ್ಲಿ ಕ್ವಾಂಟಮ್, ಸೆಮಿಕಂಡಕ್ಟರ್, ಬಾಹ್ಯಾಕಾಶ, ರಕ್ಷಣೆ, ಎಐ, ಸೈಬರ್ ಸೆಕ್ಯುರಿಟಿ ಕ್ಷೇತ್ರದಲ್ಲಿ ಸ್ವಸಾಮರ್ಥ್ಯ ವೃದ್ಧಿಸಿಕೊಂಡು, ಆಮದನ್ನು ಕಡಿತಗೊಳಿಸಿ, ಜಾಗತಿಕ ನಾಯಕತ್ವ ಸಾಧಿಸುವಂತೆ ಪ್ರಯತ್ನಿಸಬೇಕು ಎಂದು ಹೇಳಿದರು.ಅಧ್ಯಕ್ಷತೆ ವಹಿಸಿದ್ದ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, ಪದವಿಯು ಒಂದು ಜವಾಬ್ದಾರಿಯಾಗಿದ್ದು, ಸಮಾಜದ ಸಮಸ್ಯೆಗಳಿಗೆ ಉತ್ತಮ ತಾಂತ್ರಿಕ ಪರಿಹಾರ ನೀಡುವುದು ಮುಖ್ಯ. ವಿಕಸಿತ ಭಾರತದ ಪರಿಕಲ್ಪನೆ ಸಾಕಾರಗೊಳಿಸುವಲ್ಲಿ ಯುವ ಎಂಜಿನಿಯರುಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದರು.ಬದಲಾವಣೆಗಳಿಗೆ ಹೊಂದಿಕೊಳ್ಳುತ್ತ ನಿರಂತರ ಕಲಿಕೆ ಮೂಲಕ ಸಮಾಜಕ್ಕೆ ಆದರ್ಶ ವ್ಯಕ್ತಿಗಳಾಗಬೇಕು ಎಂದು ಹಾರೈಸಿದರು.ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಸಂಘದ ತಾಂತ್ರಿಕ ಶಿಕ್ಷಣದ ನಿರ್ದೇಶಕ ಆರ್.ಎನ್. ಹೆರಕಲ್, ಪ್ರಾಚಾರ್ಯ ಬಿ.ಆರ್.ಹಿರೇಮಠ, ಪರೀಕ್ಷಾ ನಿಯಂತ್ರಣಾಧಿಕಾರಿ ಕೆ. ಚಂದ್ರಶೇಖರ ಇದ್ದರು. ಐಐಟಿ ಮದ್ರಾಸಿನ ಪ್ರಾಧ್ಯಾಪಕ ಜಿ.ಆರ್. ದೊಡಗೌಡರ, ಎಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ಸಿ.ವಿ.ಕೋಟಿ, ರುದ್ರಣ್ಣ ಅಕ್ಕಿಮರಡಿ, ಕುಮಾರ ಯಳ್ಳಿಗುತ್ತಿ, ವಿವಿಧ ಕಾಲೇಜಿ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಸಜ್ಜನ, ಕುಮಾರಸ್ವಾಮಿ ಹಿರೇಮಠ, ಗುರುಬಸವ ಸೂಳಿಭಾವಿ, ಮಹೇಶ ಕಕರಡ್ಡಿ ಇದ್ದರು.ಪದವಿ ಪ್ರದಾನ2023–24 ಸಾಲಿನಲ್ಲಿ ಬಿಇ ಪದವಿಯ 11 ವಿಭಾಗಗಳ 660 ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ವಿಭಾಗದ 57 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 717 ಪದವಿ ಪ್ರದಾನ ಮಾಡಲಾಯಿತು. 13 ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕಿನೊಂದಿಗೆ 16 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ.

# ಚಾಲುಕ್ಯ ಉತ್ಸವ: ಸಿದ್ಧತೆಗೆ ಜಿಲ್ಲಾಧಿಕಾರಿ ಸೂಚನೆ





■ ನೈಜ್ಯ ದೇಸೆ ನ್ಯೂಸ್

ಬಾಗಲಕೋಟೆ : 'ಚಾಲುಕ್ಯರ ಗತವೈಭವ ಸಾರುವ ಚಾಲುಕ್ಯ ಉತ್ಸವವನ್ನು ಜನವರಿ 19ರಿಂದ 21ವರೆಗೆ ವಿಜೃಂಭಣೆಯಿಂದ ಆಚ–'ರಿಸಲು ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಚಾಲುಕ್ಯ ಉತ್ಸವ–2025' ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.'ಜ.19ರಂದು ಬಾದಾಮಿ, 20ರಂದು ಪಟ್ಟದಕಲ್ಲು ಹಾಗೂ 21ರಂದು ಐಹೊಳೆಯಲ್ಲಿ ಉತ್ಸವ ನಡೆಯಲಿದೆ. ಸಮಯ ಕಡಿಮೆ ಇರುವುದರಿಂದ ಎಲ್ಲ ಸಿದ್ಧತೆಗಳನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಬೇಕು' ಎಂದು ವಿವಿಧ ಸಮಿತಿಗಳಿಗೆ ಸೂಚನೆ ನೀಡಿದರು.'ಜ.12ರಂದು ಮಧ್ಯಾಹ್ನ 3 ಗಂಟೆಗೆ ಬಾದಾಮಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಿದ್ಧತೆ ಕುರಿತು ಸಭೆ ನಡೆಯಲಿದೆ. ಮೂರು ದಿನಗಳ ಉತ್ಸವದಲ್ಲಿ ಭಾಗವಹಿಸುವ ಕಲಾವಿದರ ಪಟ್ಟಿಯನ್ನು ಅಂತಿಮಗೊಳಿಸಿ, ಆಮಂತ್ರಣ ಪತ್ರಿಕೆ ಸಿದ್ಧಪಡಿಸಬೇಕು. ಬಾದಾಮಿ, ಪಟ್ಟದಕಲ್ಲು ಹಾಗೂ ಐಹೊಳೆಯಲ್ಲಿ ಉತ್ಸವದ ವೇದಿಕೆ ತಯಾರಿಗೆ ಸಂಬಂಧಿಸಿದ ಅಧಿಕಾರಿಗಳು ಭರದ ಸಿದ್ಧತೆ ಕೈಗೊಳ್ಳಬೇಕು. ಇಂದಿನಿಂದಲೇ ಸ್ಮಾರಕಗಳ ಸುತ್ತ ಸ್ವಚ್ಛತೆ ಕೈಗೊಂಡು, ರಸ್ತೆಗಳಲ್ಲಿ ತಗ್ಗು, ಗುಂಡಿಗಳನ್ನು ಮುಚ್ಚಿಸಬೇಕು' ಎಂದು ತಿಳಿಸಿದರು.ಸಂಗಪ್ಪ ಜಿಲ್ಲಾಧಿಕಾರಿಸ್ಥಬ್ಧಚಿತ್ರ ತಯಾರಿ ಅಂತಿಮಗೊಳಿಸಿ ಜಿಲ್ಲೆಯಲ್ಲಿ ಸಂಚರಿಸಲು ಕ್ರಮಕೈಗೊಳ್ಳಬೇಕು. ಉತ್ಸವದ ಮುನ್ನಾದಿನ ಗ್ರಾಮೀಣ ಕ್ರೀಡೆಗಳಾದ ಕುಸ್ತಿ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆ ಹಮ್ಮಿಕೊಳ್ಳಲಾಗುತ್ತಿದೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಹೆಚ್ಚುವರಿ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ವಿವಿಧ ಸಮಿತಿಯ ಅಧಿಕಾರಿಗಳು ಹಾಗೂ ಸದಸ್ಯರು ಇದ್ದರು.ಊಟ ವಸತಿ ವ್ಯವಸ್ಥೆ ಸಮರ್ಪಕವಾಗಿರಲಿ'ಪಟ್ಟದಕಲ್ಲು ಹಾಗೂ ಐಹೊಳೆ ಗ್ರಾಮದಲ್ಲಿ ಸ್ವಚ್ಛತೆ ಕೈಗೊಳ್ಳಲು ಗ್ರಾಮ ಪಂಚಾಯಿತಿ ಅಭಿವೃದ್ಧಿಗಳು ಕ್ರಮವಹಿಸಿ. ಉತ್ಸವ ನಡೆಯುವ ಮೂರೂ ಸ್ಥಳಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಕಲಾವಿದರನ್ನು ವೇದಿಕೆಗೆ ಕರೆತರಲು ವಾಹನಗಳ ಸಿದ್ಧತೆ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಿಕೊಳ್ಳಬೇಕು. ವಾಸ್ತವ್ಯಕ್ಕೆ ಹೋಟೆಲ್ ಸಮುದಾಯ ಭವನ ವಸತಿ ನಿಲಯಗಳನ್ನು ಗುರುತಿಸಿ ಪಟ್ಟಿ ಮಾಡಿಕೊಳ್ಳಬೇಕು' ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ ತಿಳಿಸಿದರು.

## ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕ ಕೆಲಸ: ಬೋಸರಾಜು

■ ನೈಜ್ಯ ದೇಸೆ ನ್ಯೂಸ್

ಹಾಲಾಪೂರ ಗ್ರಾಮಕ್ಕೆ ಎನ್ ಎಸ್ ಬೋಸರಾಜು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಭೂಮಿಪೂಜೆ, ಉದ್ಘಾಟನೆಗಾಗಿ ಆಗಮಿಸಿದ್ದರು. ನಂತರ ಸುದ್ದಿಗಾರರ ಜೊತೆ ಮಾತನಾಡುತ್ತಾ ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳಿಗೆ ವೇಗವಾಗಿ ಕೆಲಸ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಜನಪರ, ಅಭಿವೃದ್ಧಿಪರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ಜನರಿಗೆ ಮುಟ್ಟಿಸುವ ಪ್ರಾಮಾಣಿಕ ಕೆಲಸ ಮಾಡುತ್ತಿದ್ದು, ವಿರೋಧ ಪಕ್ಷಗಳಿಗೆ ಸಹಿಸಲು ಆಗುತ್ತಿಲ್ಲ ಪ್ರತಿಯೊಂದು ಕೆಲಸದಲ್ಲೂ ಟಿಕೆ ಟಿಪ್ಪಣಿ ಮಾಡುವುದು ಬಿಟ್ಟರೆ ಬೇರೆ ಯಾವ ಕೆಲಸ ಇಲ್ಲ, ಬರುವ ದಿನಗಳಲ್ಲಿ ಮತ್ತಷ್ಟು ಕೆಲಸ ಮಾಡಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಸಕ ಆರ್ ಬಸನಗೌಡ ತುರವಿಹಾಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಪಾಟೀಲ್ ಯದ್ದಲದಿನ್ನಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ, ಅಂದಾನಪ್ಪ ಗುಂಡಳ್ಳಿ, ವೆಂಕಟರೆಡ್ಡಿಗೌಡ, ಗ್ಯಾರಂಟಿ ಸಮಿತಿ ಅಧ್ಯಕ್ಷ ಮಹಿಬೂಬ್ ಸಾಬ ಮುದ್ದಾಪುರ, ಎಚ್ ಬಿ ಮುರಾರಿ ಹಾಗೂ ಇನ್ನು ಅನೇಕ ಮುಖಂಡರು, ಕಾರ್ಯಕರ್ತರು ಇದ್ದರು.



# ಬರಗೂರು ಅಂತಃಕರಣದ ಬರಹಗಾರ: ಕುಲಪತಿ ಎಸ್.ವಿ.ಡಾಣಿ



■ ನೈಜ್ಯ ದೇಸೆ ನ್ಯೂಸ್

ಇಲ್ಲಿನ ಶ್ರೀಕೊಲ್ಲಿನಾಗೇಶ್ವರರಾವ್ ಗಂಗಯ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂಬೇಡ್ಕರ್ ಸಭಾಂಗಣದಲ್ಲಿ ಶನಿವಾರ ಬರಗೂರು ರಾಮಚಂದ್ರಪ್ಪ ಅವರ 'ಸೌಹಾರ್ದ ಭಾರತದ ಸಮಾನತೆಯ ಸ್ನೇಹಿತ' ಕೃತಿ ಲೋಕಾರ್ಪಣೆ ಮಾಡಲಾಯಿತು.ಕೊಪ್ಪಳ ವಿಶ್ವವಿದ್ಯಾಲಯದ ನೂತನ ಕುಲಪತಿ ಎಸ್.ವಿ.ಡಾಣಿ ಮಾತನಾಡಿ, 'ಬರಗೂರು ರಾಮಚಂದ್ರಪ್ಪ ಸೂಕ್ಷ್ಮ ಸಂವೇದನೆ, ಮಾನವೀಯ ಮೌಲ್ಯದ ಬರಹಗಾರ. ದುಷ್ಟಶಕ್ತಿಯಿಂದ ಸದ್ಯ ಭಾರತದ ಸೌಹಾರ್ದ ಉಳಿಸುವ ಅಗತ್ಯವಿದೆ' ಎಂದರು.ಶರಣೇಗೌಡ ಪೊಲೀಸ್‌ಪಾಟೀಲ ಮಾತನಾಡಿ, 'ಬರಗೂರ ಅವರದ್ದು ಪ್ರಭಾವಿಸುವಂತ ವ್ಯಕ್ತಿತ್ವ. ಅವರ ಚಿಂತನೆಗಳು ಸಮಕಾಲೀನ ಸಂದರ್ಭಕ್ಕೆ ಸೂಕ್ತವಾದವು' ಎಂದರು.ಬಹುಮುಖಿ ಸಾಂಸ್ಕೃತಿಕ ವೇದಿಕೆ ಸಂಚಾಲಕಿ ಮುಮ್ತಾಜ್ ಬೇಗಂ ಮಾತನಾಡಿ, 'ಮನುಷ್ಯ ಬದುಕಿನಲ್ಲಿ ಎಲ್ಲಕ್ಕಿಂತ ಮಿಗಿಲಾದದ್ದು ಮನುಷ್ಯತ್ವ ಎಂದು ಬರಗೂರು ಸಾರಿದ್ದಾರೆ' ಎಂದರು.ಬಸವರಾಜ ಗೌಡನಬಾವಿ ಮಾತನಾಡಿ, 'ಬರಗೂರು ರಾಮಚಂದ್ರಪ್ಪ ಅವರ ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ ಕೃತಿ ಮನುಷ್ಯ ಸಂಬಂಧಗಳನ್ನು ಬೆಸೆಯುವ ಕನಸು ಹೊತ್ತು ಬರುತ್ತಿದೆ' ಎಂದರು.ಶಿವರಾಜ ಗು–ರಿಕಾರ, ಸಿದ್ದಯ್ಯ ಪುರಾಣಿ ಪ್ರತಿಷ್ಠಾನದ ಅಧ್ಯಕ್ಷ ಅಜ್ಮೀರ ನಂದಾಪೂರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರುದ್ರೇಶ ಮಡಿವಾಳ, ರವಿ ಹಾದಿಮನಿ, ಪದ್ಮಶ್ರೀ, ಲಕ್ಷ್ಮೀಬಾಯಿ, ಉಷಾರಾಣಿ, ಪಾಗುಂಡಪ್ಪ, ಪವನಕುಮಾರ ಗುಂಡೂರು, ಬಾಲಪ್ಪ ಬಡಿಗೇರ, ಹನುಮಂತಪ್ಪ, ಮಂಜುಳಾ, ಅಪೂರ್ವ, ಉಷಾರಾಣಿ, ಮಂಜುಳಾ ಪಾಟೀಲ, ಸುನಂದಾ, ಸಹಾಯಕ ಪ್ರಾಧ್ಯಾಪಕ ಫಣಿರಾಜ್ ಬಾರಕಾರ, ರವಿ ಹಾದಿಮನಿ, ಪವಿತ್ರಾ, ಭುವನೇಶ್ವರಿ ಸೇರಿದಂತೆ ಅನೇಕರು ಇದ್ದರು.

# ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ ಆರೋಪ: ಬಿಜೆಪಿ ಪ್ರತಿಭಟನೆ

■ ನೈಜ್ಯ ದೇಸೆ ನ್ಯೂಸ್

ರಾಯಚೂರು: ಹುಬ್ಬಳ್ಳಿಯಲ್ಲಿ ಮಹಿಳೆಯನ್ನು ಪೊಲೀಸರು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ನಗರದ ಅಂಬೇಡ್ಕರ್ ವೃತ್ತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.ಪಕ್ಷದ ಕಾರ್ಯಕರ್ತೆಯನ್ನು ವಿವಸ್ತ್ರಗೊಳಿಸಿರುವ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು,ಮಹಿಳೆಯ–ರಿಗೆ ಪವಿತ್ರ ಸ್ಥಾನ ನೀಡುವ ಈ ಸಮಾಜದಲ್ಲಿ ರಾಜಕೀಯ ದ್ವೇಷಕ್ಕಾಗಿ ಸಾರ್ವಜನಿಕವಾಗಿ ದೌರ್ಜನ್ಯ ಎಸಗಲು ಪೊಲೀಸರು ಕುಮ್ಮಕ್ಕು ನೀಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.ಮುಖ್ಯಮಂತ್ರಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೀರನಗೌಡ ಲೆಕ್ಕಿಹಾಳ, ವಿಧಾನ ಪರಿಷತ್ ಮಾಜಿ ಸದಸ್ಯ ಅಮರನಾಥ ಪಾಟೀಲ, ಮಾಜಿ ಸಂಸದ ಬಿ.ವಿ ನಾಯಕ, ಶಿವಬಸಪ್ಪ ಮಾಲಿ ಪಾಟೀಲ, ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರವೀಂದ್ರ ಜಲ್ದಾರ್, ಯುವ ಘಟಕದ ಜಿಲ್ಲಾಧ್ಯಕ್ಷ ಎನ್.ವಿನಾಯಕ ರಾವ್, ಜಿಲ್ಲಾ ಘಟಕದ ವಕ್ತಾರ ಎಂ.ಸಿದ್ದನಗೌಡ ನೆಲಹಾಳ, ಕಾರ್ಯದರ್ಶಿ ಜಂಬಣ್ಣ ನೀಲಗಲ್, ನರಸರೆಡ್ಡಿ, ಎ.ಚಂದ್ರಶೇಖರ, ಈರೇಶ, ಜೆ. ಎಂ.ಮೌನೇಶ, ಬಿ.ಗೋವಿಂದ, ಕಡಗೋಳು ರಾಮಚಂದ್ರ, ಅಮರೇಶ ಪಾಟೀಲ ಸಿರವಾರ, ಶರಣಮ್ಮ ಕಾಮರೆಡ್ಡಿ, ವಿಜಯರಾಜೇಶ್ವರಿ, ವಾಣಿಶ್ರೀ, ಸುಮತಿ ಶಾಸ್ತ್ರಿ ಸೇರಿದಂತೆ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ನೇಮಕಾತಿ ಪ್ರಕಟಣೆ

KITS ನೇಮಕಾತಿ 2026: 3 ಸಹಾಯಕ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಇನ್ನೋವೇಶನ್ & ಟೆಕ್ನಾಲಜಿ ಸೊಸೈಟಿ ಜನವರಿ 2026 ರ KITS ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22–ಜನವರಿ–2026 ರಂದು ಅಥ–'ವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: ktech.karnataka.gov.in

## ಸ್ವದೇಶಿ ಬಳಸಿ ದೇಶ ಬೆಳೆಸಿ ನಿವೃತ್ತ ಯೋಧರಿಂದ ಸ್ವದೇಶಿ ಜಾಗರಣ ಸೈಕಲ್ ಜಾಗೃತಿ

■ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಶ್ರೀ ಪರಿಪೂರ್ಣ ಸಾನತನ ಚಾರಿಟಬಲ್ ಟ್ರಸ್ಟ್ ಹಾಗೂ ನಿವೃತ್ತ ಯೋಧರಿಂದ ಸ್ವದೇಶಿ ಜಾಗರಣ ಸೈಕಲ್ ಜಾಗೃತಿ ಜಾಥ ತಂಡದ ಸದಸ್ಯರು ಇಂದು ಪಟ್ಟಣಕ್ಕೆ ಆಗಮಿಸಿ ಕಾಕತೀಯ ಶಿಕ್ಷಣ ಸಂಸ್ಥೆಯ ವಸತಿ ನಿಲಯದ ಮಕ್ಕಳಿಗೆ ಜಾಗೃತಿ ಮೂಡಿಸಿ ಭಾರತೀಯ ಸೇನೆಯ ನಿವೃತ್ತ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಮಾತನಾಡಿ ಶ್ರೀ ಪರಿಪೂರ್ಣ ಸಾನತನ ಚಾರಿಟಬಲ್ ಟ್ರಸ್ಟ್ ಹಾಗೂ ಮಾಜಿ ಯೋಧರಿಂದ ಜನರಲ್ಲಿ ಸ್ವದೇಶಿ ವಸ್ತುಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ನಿವೃತ್ತ ಭಾರತೀಯ ಸೇನೆಯ ಯೋಧರೊಂದಿಗೆ ಬೆಂಗಳೂ–ರಿನ ನೆಲಮಂಗಲದಿಂದ ಸೈಕಲ್ ಜಾಗೃತಿ ಜಾಥವನ್ನು ಪ್ರಾರಂಭಿಸಿ ರಾಜ್ಯದ 22 ಜಿಲ್ಲೆಗಳಲ್ಲಿ ಒಟ್ಟು 2650 ಕಿ.ಮೀ.ದೂರವನ್ನು ಸೈಕಲ್ ಮೂಲಕ ಸಂಚಾರಿಸಿ ಮಾರ್ಗದಲ್ಲಿ ಬರುವ ತಾಲೂಕು ಹಾಗೂ ಗ್ರಾಮಗಳಲ್ಲಿನ ಜನರಿಗೆ ಹಾಗೂ ಶಾಲೆಗಳ ವಿದ್ಯಾರ್ಥಿಗಳಿಗೆ ಸ್ವದೇಶಿ ವಸ್ತುಗಳ ಬಳಕೆಯಿಂದ ದೇಶದ ಬೆಳವಣಿಗೆ ಯಾಗುತ್ತದೆ ಎನ್ನುವ ಕು–ರಿತು ಜಾಗೃತಿ ಮೂಡಿಸಲಾಗುತ್ತಿದೆ. ಇನ್ನು 10 ದಿನಗಳಲ್ಲಿ 7 ಜಿಲ್ಲೆಗಳಲ್ಲಿ ಸಂಚರಿಸಿ ಮರಳಿ ಬೆಂಗಳೂರಿನಲ್ಲಿ ಜಾಗೃತಿ ಜಾಥ ಮುಗಿಸಲಾಗುವುದು. ನಮ್ಮ ದೇಶದಲ್ಲಿ ನಮ್ಮ ರೈತರು ಉತ್ಪದಿಸುವ ಆಹಾರ ಧಾನ್ಯಗಳನ್ನು ವಸ್ತುಗಳನ್ನು ,ಸ್ವದೇಶಿ ಉತ್ಪನ್ನಗಳನ್ನು ಬಳಸದೆ ಇದ್ದಲ್ಲಿ ನಮ್ಮ ರೈತರು,ಕಾರ್ಮಿಕರು ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ವಿದೇಶಿ ವಸ್ತುಗಳನ್ನು ಹೆಚ್ಚಾಗಿ ಬಳಸುವುದರಿಂದ ನಮ್ಮ ಸಂಪತ್ತು ವಿದೇಶಗಳಿಗೆ ಸೇರುತ್ತದೆ. ನಮ್ಮ ವಸ್ತುಗಳನ್ನು ಬಳಸಿ ನಮ್ಮ ಸಂಪತ್ತು ನಮ್ಮಲಿ ಉಳಿಸಿಕೊಳೋಣ ಎನ್ನುವ ಉದ್ದೇಶದಿಂದ ದೇಶದ ಪ್ರಾಧಾನಿಗಳು ಮೇಕ್ ಇನ್ ಇಂಡಿಯ ಪರಿಕಲ್ಪನೆಯನ್ನು ನಮಗೆ ನೀಡಿದ್ದಾರೆ ನಾವು ಹೋರಾಟದಿಂದ ಗಳಿಸಿದ ಸ್ವಾತಂತ್ರ▯▯ದ ರಕ್ಷಣೆಗಾಗಿ ನಮ್ಮ ದೇಶದ ಗಡಿಯಲ್ಲಿ ಯೋಧರು ಹಗಲಿರುಳು ಶ್ರಮಿಸುತ್ತಿದ್ದಾರೆ. ಅದ್ದ–ರಿಂದ ನಮ್ಮಗೆ ಅಗತ್ಯವಿರುವ ವಸ್ತುಗಳನ್ನು ನಾವೆ ತಯಾರಿಸಿಕೊಂಡು ಬಳಸಿಕೊಳೋಣ ನಮ್ಮ ಆರ್.ಬಿ.ಐ.ರೂಪಿಸಿದ ಭಾರತ ಆಫ್,ಭಿಮ ಆಪ್ ಬಳಸೋಣ ಎಂದು ಕರೆ ನೀಡಿದರು.ನಿವೃತ್ತ ಉಪಕಾರ್ಯದರ್ಶಿ ರಮೇಶ ನರಸಿಂಹ, ನಿವೃತ್ತ ಭಾರತೀಯ ಸೇನೆಯ ಅಧಿಕಾರಿ ಕರ್ನಾಲ್ ಖಂಡಸ್ವಾಮಿ,ಕಾಮೆಂಡರ್ನಿಲಕಂಠ,ಡಾ.ಗೋಪಾಲಕೃಷ್ಣ ಪಿಳ್ಳೈ,ಕ್ಯಾಪ್ಟನ್ ಡಾ.ನೆಡುನಚಿಜೀಯನ್, ಸಹಸ್ರನಾಮಮಿಯಾರ್, ಬಾಬು ಕಮಲಕಾರ್ , ವಾಣಿಜ್ಯೋದ್ಯಮಿ ಹೆಮಂತ್ ಜಾದವ್, ಸಿವೀಲ್ ಇಂಜಿನಿಯರ್ ಸಾಗರ್ ದೇವರಾಜ, ರವರ ತಂಡದಿಂದ ಸೈಕಾಲ್ ಜಾಥ ಮೂಲಕ ಸ್ವದೇಶಿ ಬಳಸಿ ದೇಶಬೆಳೆಸಿ ಎನ್ನುವ ಘೋಷ ವಾಕ್ಯದೊಂದಿಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯನಡೆಯಿತು. ಕಕಾತೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಗೋಡವರ್ತಿ ಸತ್ಯನಾರಾಯಣ, ಕಾರ್ಯದರ್ಶಿ ಜಿ. ಶ್ರೀನಿವಾಸ, ಸುಬ್ಬರಾವ್ ಚೌದ್ರಿ,ಉಪಾಧ್ಯಕ್ಷರಾದ ಪುಟ್ಟಪ್ರಸಾದ್, ಎಂ.ಆರ್.ರಾಜು, ಪಣಿಕುಮಾರ, ನಾಗೇಶ್ವರರಾವ್, ದೊರೆಬಾಬು, ಬಿ.ಟಿ. ಸತ್ಯನಾರಾಯಣ, ಜಿ,ಶ್ರೀನಿವಾಸ, ಎಸ್. ರಮೇಶ, ಪಂಡು, ಕಕಾತೀಯ ಶಾಲೆಯ ಮುಖ್ಯಗುರು ವೀರಭದ್ರಗೌಡ ಸೇರಿದಂತೆ ವಸತಿ ಶಾಲೆಯ ವಿದ್ಯಾರ್ಥಿಗಳು ಇದ್ದರು.




## ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ: ಸಾಧಕ ಬಾಧಕಗಳ ಕುರಿತು ಸಂವಾದ ಕಾರ್ಯಕ್ರಮ




■ ನೈಜ್ಯ ದೆಸೆ ನ್ಯೂಸ್

ಸಿಂಧನೂರು; ಜ 11 ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (Special Intensive Revision – SIR) ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಿಂಧನೂರು ನಗರದ ಟೌನ್ ಹಾಲ್‌ನಲ್ಲಿ ಸಾಧಕ ಬಾಧಕ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಕಾರ್ಯಕ್ರಮವನ್ನು ನಗರದ ಖ್ಯಾತ ಮಕ್ಕಳ ತಜ್ಞರಾದ ಡಾ. ಶಿವರಾಜ್ ಪಾಟೀಲ್ ಅವರು ಹಲಗೆ ಬಡೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಮತದಾರರ ಪಟ್ಟಿ ದೇಶದ ಪ್ರಜಾಪ್ರಭುತ್ವದ ಬಲಿಷ್ಠ ಅಡಿಪಾಯವಾಗಿದ್ದು, ಯಾವುದೇ ಅರ್ಹ ನಾಗರಿಕ ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ತಿಳಿಸಿದರು.ನಂತರ ಉಪನ್ಯಾಸ ನೀಡಲು ಆಗಮಿಸಿದ ಶಿವ ಸುಂದರ್ ಅವರು ಮಾತನಾಡಿ ಸಂವಾದದಲ್ಲಿ SIR.ದಾಖಲೆಗಳ ಕೊರತೆ, ಬಡ ಹಾಗೂ ವಲಸೆ ಕಾರ್ಮಿಕರಿಗೆ ಎದುರಾಗುವ ಸಮಸ್ಯೆಗಳು, ನಾಗರಿಕತ್ವ ಪರಿಶೀಲನೆ ಕುರಿತ ಗೊಂದಲಗಳು ಸೇ–ರಿದಂತೆ ಬಾಧಕ ಅಂಶಗಳ ಕುರಿತು ವಿಸ್ತೃತ ಚರ್ಚೆ ನಡೆಯಿತು. ಖಖಖ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ವಿರುದ್ಧ ದೇಶದ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಬಡ, ವಲಸೆ ಹಾಗೂ ಅಂಚಿನ ಸಮುದಾಯಗಳಿಂದ ವಿರೋಧ ವ್ಯಕ್ತವಾಗುತ್ತಿದೆ. ಮತದಾನ ಹಕ್ಕಿಗೆ ಅಪಾಯ SIR ಪ್ರಕ್ರಿಯೆಯಲ್ಲಿ ದಾಖಲೆಗಳ ಕೊರತೆಯಿಂದ ನೈಜ ಮತದಾರರ ಹೆಸರುಗಳು ಪಟ್ಟಿಯಿಂದ ಕೈಬಿಡುವ ಸಾಧ್ಯತೆ ಇದೆ. ಇದು ಸಂವಿಧಾನಾತ್ಮಕ ಮತದಾನ ಹಕ್ಕಿಗೆ ಧಕ್ಕೆಯಾಗಬಹುದು,. ಬಡ ಮತ್ತು ವಲಸೆ ಕಾರ್ಮಿಕರಿಗೆ ಸಂಕಷ್ಟ ಆಧಾರ್, ಜನನ ಪ್ರಮಾಣಪತ್ರ, ವಾಸಸ್ಥಳದ ದಾಖಲೆಗಳಿಲ್ಲದ ಬಡವರು ಹಾಗೂ ವಲಸೆ ಕಾರ್ಮಿಕರು ತಮ್ಮ ಹೆಸರು ಉಳಿಸಿಕೊಳ್ಳಲು ಕಷ್ಟಪಡುವ ಪರಿಸ್ಥಿತಿ ಉಂಟಾಗಿದೆ. , NRC ಹಿಂಬಾಗಿಲು ಎಂಬ ಆತಂಕ ಖಖಖ ಅನ್ನು "ಹಿಂಬಾಗಿಲು NRC" ಆಗಿ ಬಳಸುವ ಪ್ರಯತ್ನ ಎನ್ನುವ ಭಯ ಜನರಲ್ಲಿ ಹೆಚ್ಚಿದೆ. ನಾಗರಿಕತ್ವ ಪ್ರಶ್ನೆಯಾಗಿ ಮಾರ್ಪಡುವ ಅಪಾಯವಿದೆ ಎಂಬ ಆರೋಪಗಳಿವೆ., ಅಧಿಕಾರಿಗಳ ಅತಿಯಾದ ವಿವೇಕಾಧೀನತೆ ಬಿಎ/ ಅಧಿಕಾರಿಗಳಿಗೆ ಹೆಚ್ಚುವರಿ ಅಧಿಕಾರ ನೀಡುವುದರಿಂದ ಪಕ್ಷಪಾತ, ತಪ್ಪು ನಿರ್ಧಾರಗಳ ಸಾಧ್ಯತೆ ಇದೆ ಎಂಬ ಟೀಕೆ ಕೇಳಿಬರುತ್ತಿದೆ.ಸಮರ್ಪಕ ಜನಜಾಗೃತಿ ಕೊರತೆ SIR ಕುರಿತು ಸರಿಯಾದ ಮಾಹಿತಿ ಜನರಿಗೆ ತಲುಪಿಲ್ಲ. ಅಜ್ಞಾನದಿಂದಲೇ ಹಲವರು ತಮ್ಮ ಹೆಸರು ಕೈಬಿಡಲ್ಪಡುವ ಭೀತಿಯಲ್ಲಿದ್ದಾರೆ. ಕಾಲಮಿತಿ ಮತ್ತು ಪ್ರಕ್ರಿಯೆಯ ಒತ್ತಡ ಕಡಿಮೆ ಅವಧಿಯಲ್ಲಿ ದಾಖಲೆ ಸಲ್ಲಿಸುವ ಒತ್ತಡ ಜನಸಾಮಾನ್ಯರಿಗೆ ಅಸಾಧ್ಯವಾಗುತ್ತಿದೆ. . ಪ್ರಜಾಪ್ರಭುತ್ವಕ್ಕೆ ಧಕ್ಕೆ ಮತದಾರರ ಸಂಖ್ಯೆಯ ಇಳಿಕೆಯಿಂದ ಚುನಾವಣೆಗಳ ನ್ಯಾಯಸಮ್ಮತತೆ ಮತ್ತು ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆಯಾಗಬಹುದು ಎಂಬ ಆತಂಕ ಇದೆ. ವಕ್ತಾರರು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮಾನವೀಯ ದೃಷ್ಟಿಕೋನ ಬಹಳ ಅಪಾಯಕಾರಿ , ಯಾವುದೇ ನಾಗರಿಕರ ಹಕ್ಕುಗಳಿಗೆ ಧಕ್ಕೆ ಉಂಟಾಗದಂತೆ ಸರ್ಕಾರ ಹಾಗೂ ಚುನಾವಣಾ ಆಯೋಗ ಕ್ರಮ ವಹಿಸಬೇಕು ಖಖಖ ಕಾಯ್ದೆ ಸವಿಧಾನದ ವಿರುದ್ಧವಾಗಿದೆ ಕೂಡಲೇ ಈ ಕಾಯ್ದೆಯನ್ನು ಕೈಬಿಡಬೇಕೆಂದು ಒತ್ತಾಯಿಸಿದ್ದಾರೆ ಚುನಾವಣಾ ಆಯೋಗ ಒಂಬತ್ತು ರಾಜ್ಯ ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮಹತ್ವದ ಘಟ್ಟಕ್ಕೆ ಬಂದಿದೆ. ಈವರೆಗೆ ಪ್ರಕಟಗೊಂಡ ಕರಡು ಪಟ್ಟಿಯಲ್ಲಿ ಒಟ್ಟಾರೆ 6.5 ಮತದಾರರ ಹೆಸರನ್ನು ಕೈಬಿಡಲಾಗಿದೆ. ಆರಂಭದ ವೇಳೆ 9 ರಾಜ್ಯ ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 50.90 ಕೋಟಿ ಮತದಾರರಿದ್ದರು. ಕರಡು ಪಟ್ಟಿ ಪ್ರಕಟಿಸಿದ ಬಳಿಕ ಮತದಾರರ ಸಂಖ್ಯೆ 44.40 ಕೋಟಿಗೆ ಇಳಿಕೆಯಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಬಿಹಾರದಲ್ಲಿ ಮೊದಲ ಹಂತದಲ್ಲಿ ನಡೆದಿದ್ದ ಎಸ್‌ಐಆರ್ ಪ್ರಕ್ರಿಯೆಯಲ್ಲಿ 65 ಲಕ್ಷ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿತ್ತು, ಕರಡು ಪಟ್ಟಿಯಿಂದ ತೆಗೆದುಹಾಕಿದವರ ಹೆಸರುಗಳನ್ನು ಎಎಸ್‌ಡಿ ಅಥವಾ ಗೈರುಹಾಜರಿ, ಸ್ಥಳಾಂತರ ಮತ್ತು ಮೃತ/ನಕಲು ವರ್ಗದಲ್ಲಿ ಇರಿಸಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ. ಎಸ್‌ಐಆರ್ ನಡೆಯುತ್ತಿರುವ ಹೆಚ್ಚಿನ ರಾಜ್ಯಗಳಲ್ಲಿ 2002 ಮತ್ತು 2004ರ ನಡುವೆ ಮತದಾರರ ಪಟ್ಟಿಯ ಕೊನೆಯ ಎಸ್‌ಐಆರ್ ನಡೆದಿತ್ತು. ಅಸ್ಸಾಂನಲ್ಲಿ ಮತದಾರರ ಪಟ್ಟಿಯ ಪ್ರತ್ಯೇಕ ವಿಶೇಷ ಪರಿಷ್ಕರಣೆ ನಡೆಯುತ್ತಿದೆ. ಯುಪಿಯಲ್ಲಿ ಅತ್ಯಧಿಕಉತ್ತರ ಪ್ರದೇಶದಲ್ಲಿ ಈ ಹಿಂದೆ 15.44 ಕೋಟಿ ಮತದಾರರಿದ್ದರು. ಇವರಲ್ಲಿ ಶೇ. 18.70 ಅಥವಾ 2.89 ಕೋಟಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಹೀಗಾಗಿ ಪ್ರಸ್ತುತ 12.55 ಕೋಟಿ ಮತದಾರರಷ್ಟೇ ಪಟ್ಟಿಯಲ್ಲಿ ಉಳಿದುಕೊಂಡಿದ್ದಾರೆ. ಸಾವು, ಶಾಶ್ವತ ವಲಸೆ ಅಥವಾ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ನೋಂದಣಿ ಮಾಡಿದ್ದರಿಂದಾಗಿ ಇಷ್ಟು ಪ್ರಮಾಣದ ಜನರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದರು ಅಂಡಮಾನ್ ಮತ್ತು ನಿಕೋಬಾರ್ ▯. 16.72, 202600 ಚುನಾವಣೆ ನಡೆಯಲಿರುವ ಕೇರಳದಲ್ಲಿ ಶೇ. 8.64, ಪಶ್ಚಿಮ ಬಂಗಾಳದಲ್ಲಿ ಶೇ. 7.6, ತಮಿಳುನಾಡಿನಲ್ಲಿ ಶೇ 15.18 ಮತ್ತು ಪುದುಚೇರಿಯಲ್ಲಿ ಶೇ. 10.12 ಹೆಸರುಗಳನ್ನು ಪಟ್ಟಿಯಿಂದ ಅಳಿಸಲಾಗಿದೆ. ಎಂದು ತಿಳಿಸಿದರು "ಮತದಾನ ಹಕ್ಕು ನಮ್ಮ ಮೂಲ ಹಕ್ಕು ▯ SIRಹಿಂಪಡೆ!""ದಾಖಲೆ ಇಲ್ಲದಿದ್ದರೆ ಮತವಿಲ್ಲವೇ?""SIR = ಹಿಂಬಾಗಿಲು NRC ▯ ನಾವು ಒಪ್ಪುವುದಿಲ್ಲ!""ಬಡವರ ಮತ ಹಕ್ಕಿಗೆ ಕತ್ತರಿ ಬೇಡ!" ಖಖಖ ಪ್ರಕ್ರಿಯೆಯಿಂದ ಲಕ್ಷಾಂತರ ನೈಜ ಮತದಾರರು ಹೊರಗುಳಿಯುವ ಆತಂಕ ಜನಪರ ಚರ್ಚೆ ಇಲ್ಲದೆ ಜಾರಿಗೊಳಿಸಿದ ಕ್ರಮ ತಕ್ಷಣ ಪ್ರಕ್ರಿಯೆ ಸ್ಥಗಿತಕ್ಕೆ ಆಗ್ರಹ ಎಲ್ಲ ಪಕ್ಷಗಳು, ಸಂಘಟನೆಗಳು ಒಂದಾಗಬೇಕೆಂಬ ಕರೆ ಜನಾಂದೋಲನದ ಮಾರ್ಗಗಳು ಸಂವಾದ ಸಭೆಗಳು ತಹಶೀಲ್ದಾರ್ / ಡಿಸಿ ಕಚೇರಿ ಮುಂದೆ ಮನವಿ ಸಹಿ ಸಂಗ್ರಹ ಅಭಿಯಾನ ಸಾಮಾಜಿಕ ಜಾಲತಾಣಗಳಲ್ಲಿ ಜಾಗೃತಿ ಮೂಡಿಸುವದು ಎಂದು ತಿಳಿಸಿದರು ಈ ಸಂವಾದ ಕಾರ್ಯಕ್ರಮದಲ್ಲಿ ಡಾಕ್ಟರ್ ಶಿವರಾಜ್ ಪಾಟೀಲ್, ಡಿ ಎಚ್ ಕಂಬಳಿ, ಚಂದ್ರಶೇಖರ್ ಗೊರೆಬಾಳ್, ಮುನೇಶ್ ಜಾಲವಾಡಗಿ, ವಿವಿಧ ಸಂಘಟನೆಗಳ ಮುಖಂಡರು, ವಕೀಲರು, ಪ್ರಾಧ್ಯಾಪಕರು, ಸಮಾಜಸೇವಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಅಜಾತಶತ್ರು ಹಿರಿಯ ಮುತ್ಸದ್ದಿ ಜನಾಬ್ ಲಾಲ್ ಅಹ್ಮದ್ ಸಾಹೇಬ್ರ ಜನ್ಮದಿನ ವಿಜೃಂಭಣೆಯಿಂದ ಆಚರಣೆ



■ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು ತಾಲೂಕಿನ ಅಜಾತಶತ್ರು ಹಿರಿಯ ಮುತ್ಸದ್ದಿ, ಸಮಾಜಸೇವೆಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಜನಾಬ್ ಲಾಲ್ ಅಹ್ಮದ್ ಸಾಹೇಬ್ರ ಜನ್ಮದಿನವನ್ನು ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ವತಿಯಿಂದ ಇಂದು ಅದ್ದೂ–ರಿಯಾಗಿ ಹಾಗೂ ಸಾರ್ಥಕವಾಗಿ ಆಚ–ರಿಸಲಾಯಿತು.ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ಲಾಲ್ ಅಹ್ಮದ್ ಸಾಹೇಬ್ರವರು ಧರ್ಮ, ಜಾತಿ, ಪಕ್ಷಭೇದವಿಲ್ಲದೆ ಸಮಾಜದ ಎಲ್ಲ ವರ್ಗಗಳಿಗಾಗಿ ದುಡಿದ ನಾಯಕರು ಎಂದು ಶ್ಲಾಘಿಸಿದರು. ಅವರ ಜೀವನವೇ ಯುವ ಪೀಳಿಗೆಗೆ ಪ್ರೇರಣೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಭೂಪನಗೌಡ ಪಾಟೀಲ್ ಕರಡಕಲ್, ವಿಧಾನ ಪರಿಷತ್ ಸದಸ್ಯರ ಆಪ್ತ ಸಹಾಯಕ ಚನ್ನಾರೆಡ್ಡಿ, ಲಾಲ್ ಅಹ್ಮದ್ ಮನೆತನದ ಸದಸ್ಯರು ಉಪಸ್ಥಿತರಿದ್ದು, ಶುಭಾಶಯಗಳನ್ನು ತಿಳಿಸಿದರು. ಅಂಜುಮನ್ ಲಿಂಗಸೂಗೂರು ತಾಲೂಕು ಕಮಿಟಿಯ ಗೌರವಾಧ್ಯಕ್ಷರಾದ ಅನ್ಸರ್ ಭಾಯಿ, ಅಧ್ಯಕ್ಷರಾದ ಹುಸೇನ್ ಭಾಷಾ, ಉಪಾಧ್ಯಕ್ಷರಾದ ಮುಸ್ತಫಾ, ಪ್ರಧಾನ ಕಾರ್ಯದರ್ಶಿಯಾದ ಅಮೀನ್ ಭಾಯಿ ಸೇರಿದಂತೆ ಆರಿಪ್, ಸಾಹಿಲ್, ಹುಸೇನ್, ಇಲಾಹಿ, ಸಲೀಂ, ಅಬ್ದುಲ್ಲ ರಜಾಕ್, ಆದಿಲ್, ಲಾಲ್ ಸಾಬ್, ಹಜರತ್, ಗೌಸ್ ಖುರೇಶಿ, ಬಂದೇನವಾಜ್, ಅಬ್ಬಾಸ್, ಮೌಲಾ ಭಾಯಿ, ವಸಿಂ, ಮುರ್ತುಜ, ರಫಿ ಭಾಯಿ, ಇರ್ಫಾನ್ ಮತ್ತಿತರರು ವೇದಿಕೆ ಹಂಚಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಅಂಜುಮನ್ ಕಮಿಟಿಯ ಪದಾಧಿಕಾ–ರಿಗಳು, ಬೆಂಬಲಿಗರು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದು, ಲಾಲ್ ಅಹ್ಮದ್ ಸಾಹೇಬ್ರ ದೀರ್ಘಕಾಲದ ಸಾಮಾಜಿಕ, ಶೈಕ್ಷಣಿಕ ಮತ್ತು ಸಾರ್ವಜನಿಕ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

## ಮಸ್ಕಿ:ಗಮನ ಸೆಳೆದ 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕ



■ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದ ಭ್ರಮರಾಂಬ ದೇವಸ್ಥಾನದ ಆವರಣದಲ್ಲಿ ಶಕೀಲ್ ಅಹ್ಮದ್ ನಿರ್ದೇಶನದ ನಿರ್ದಿಗಂತ ತಂಡ ಮೈಸೂರ ಪ್ರಸ್ತುತಿ 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕ ಪ್ರದರ್ಶನದೊಂದಿಗೆಕನ್ನಡ ಸಾಹಿತ್ಯ ಪರಿಷತ್ತು ಮಸ್ಕಿ.ಸರಕಾರಿ ನೌಕರರ ಸಂಘ, ಸಾವಿತ್ರಿ ಬಾಯಿ ಪುಲೆ ಶಿಕ್ಷಕಿಯರ ಸಂಘ,ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ತು,ಇತ್ತಿ ಪೌಂಡೇಶನ್,ಲಯನ್ಸ್ ಕ್ಲಬ್ ಮಸ್ಕಿ ಸಹಯೋಗದಲ್ಲಿ ಜರುಗಿದ ನಾಟಕ.ಈ ಜ್ವಲಂತ ಸಮಸ್ಯೆಗಳ ನಡುವೆಯೂ ನಾವು ಭಾರತ ಪ್ರಕಾಶಿಸುತ್ತದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ.ಈ ಹೆಮ್ಮೆಪಡುವ ವಿಷಯಗಳ ನಡುವೆಯೂ ಸಾಮಾಜಿಕ ಸಮಸ್ಯೆಗಳು ಹಲವಾರು ಇವೆ. ಇಂಥ ಜ್ವಲಂತ ಸಮಸ್ಯೆಗಳಿಗೆ ಸರ್ಕಾರಗಳು ಶಾಶ್ವತವಾದ ಪರಿಹಾರವನ್ನು ಕೊಡಬೇಕು.ಆದರೆ ವಿಪರ್ಯಾಸವೆಂದರೆ ಆಳುವ ಸರ್ಕಾರಗಳು ವ್ಯವಸ್ಥೆಯ ಎಲ್ಲಾ ಆಯಾಮಗಳ ಮೇಲೆ ತೆ–ರಿಗೆಯನ್ನು ವಿಧಿಸಿ ಅದನ್ನ ವಸೂಲಿ ಮಾಡುತ್ತಾ ಹೋಗುತ್ತವೆ. ಸಾಮಾಜಿಕ ಹಿಂದುಳಿದ ಬಡವರ್ಗಗಳು ಈ ತೆರಿಗೆಯನ್ನು ಕಟ್ಟಲಾಗದ ಆರ್ಥಿಕ ಹಿನ್ನಡೆಯ ಸ್ಥಿತಿಯಲ್ಲಿದೆ.ಇಂಥ ಗಂಭೀರ ವಿಷಯವನ್ನು 'ಕೊಡಲ್ಲ ಅಂದ್ರೆ ಕೊಡಲ್ಲ' ಎಂಬ ಅರ್ಥಪೂರ್ಣ ಶೀರ್ಷಿಕೆಯನ್ನು ಹೊಂದಿ ಈ ನಾಟಕವು ಜನರಲ್ಲಿ ಸಾಮಾಜಿ–ಕ ಜಾಗೃತಿ ಭಾವವನ್ನು ಎಚ್ಚರಿಸುವ ಕಥಾ ವಿಷಯವನ್ನು ಹೊಂದಿ ಮನೋಜ್ಞ ನಟನೆಯ ಮೂಲಕ ನಾಟಕವನ್ನು ಪ್ರಸ್ತುತಪಡಿಸಿದರು. ಈ ವೇಳೆ ಡಾ. ಶಿವ ಶರಣಪ್ಪ ಇತ್ತಿ, ಸಿ ದಾನಪ್ಪ ನಿಲಗಲ್, ವಿದ್ಯಾವತಿ ವನಕಿ, ಪಂಪಾಪತಿ ಹೂಗಾರ, ಕಳಕಪ್ಪ ಆದಿಮನಿ, ಈರಮ್ಮ ಹಾಗೂ ಇತರರು ಉಪಸ್ಥಿತರಿದ್ದರು.

# ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಅಧ್ಯಕ್ಷರಾಗಿ ಶಿವಕುಮಾರ್ ಚಲ್ಮಲ್ ಆಯ್ಕೆ



■ ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಮಾನ್ವಿ ಶಾಖೆಯ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ, ಸಂಘಟನೆಯ ರಾಜ್ಯಾಧ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ ಅವರ ನಿರ್ದೇಶನದಂತೆ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ನಡೆಯಿತು.ಚುನಾವಣೆ ಮೂಲಕ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಬಹುಮತದಿಂದ ಶಿವಕುಮಾರ್ ಚಲ್ಮಲ್ ಅವರು ಮಾನ್ವಿ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದರು.ಗೌರವಾಧ್ಯಕ್ಷರಾಗಿ ಶಫೀಕ್ ಹುಸೇನ್, ಪ್ರಧಾನ ಕಾರ್ಯದರ್ಶಿಗಳಾಗಿ ಹುಸೇನ್ ಬಾಷಾ ನಕ್ಕುಂದಿ, ಉಪಾಧ್ಯಕ್ಷರಾಗಿ ಹೊನ್ನಪ್ಪ ಕಟ್ಟಿಮನಿ ಹಾಗೂ ಆಂಜನೇಯ ನಸ್ಲಾಪುರ, ಖಜಾಂಚಿಗಳಾಗಿ ನರಸಿಂಹ ರೆಡ್ಡಿ, ಕಾರ್ಯದರ್ಶಿಗಳಾಗಿ ಬಸವರಾಜ ನಿಲೋಗಲ್, ಸಹ ಕಾರ್ಯದರ್ಶಿಗಳಾಗಿ ಮೊಹಮ್ಮದ್ ಗೌಸ್, ಸಂಘಟನಾ ಕಾರ್ಯದರ್ಶಿಗಳಾಗಿ ಈರಪ್ಪ ನಾಯಕ ದದ್ದಲ್, ಜಂಟಿ ಕಾರ್ಯದರ್ಶಿಗಳಾಗಿ ಬಸವಲಿಂಗ ನಾಯಕ ನೀರಮಾನ್ವಿ ಅವರನ್ನು ಆಯ್ಕೆ ಮಾಡಲಾಯಿತು.ಎಲ್ಲಾ ನೂತನ ಪದಾಧಿಕಾರಿಗಳಿಗೆ ಆಯ್ಕೆ ಪತ್ರಗಳನ್ನು ವಿತರಿಸಿ ಮಾತನಾಡಿದ ಸಂಘಟನೆಯ ಜಿಲ್ಲಾಧ್ಯಕ್ಷರಾದ ಸೈಯದ್ ಅಬ್ದುಲ್ ಗಣಿ ಸಾಹೇಬ್ "ಪತ್ರಕರ್ತರ ಹಕ್ಕು ರಕ್ಷಣೆ, ವೃತ್ತಿಪರ ಗೌರವ ಮತ್ತು ಏಕತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಾನ್ವಿ ಶಾಖೆ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಸಂಘಟನೆಯ ನಿಯಮಾವಳಿ ಮತ್ತು ಉದ್ದೇಶಗಳಿಗೆ ಬದ್ಧರಾಗಿ ಕೆಲಸ ಮಾಡುವಂತೆ" ಸಲಹೆ ನೀಡಿದರು.ನೂತನವಾಗಿ ಆಯ್ಕೆಯಾದ ತಾಲೂಕು ಅಧ್ಯಕ್ಷ ಶಿವಕುಮಾರ್ ಚಲ್ಮಲ್ ಮಾತನಾಡಿ, "ಮಾನ್ವಿ ತಾಲೂಕಿನ ಕಾರ್ಯನಿರತ ಪತ್ರಕರ್ತರ ಸಮಸ್ಯೆಗಳಿಗೆ ಧ್ವನಿಯಾಗುವುದು, ಅವರ ಸುರಕ್ಷತೆ ಹಾಗೂ ವೃತ್ತಿಪರ ಹಿತಾಸಕ್ತಿಗಳನ್ನು ಕಾಪಾಡುವುದು ನನ್ನ ಮೊದಲ ಆದ್ಯತೆ. ಹಿರಿಯರ ಮಾರ್ಗದರ್ಶನದಲ್ಲಿ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ" ಎಂದು ಹೇಳಿದರು.ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ವಿನೋದ ಕುಮಾರ್, ಜಿಲ್ಲಾ ಕಾರ್ಯದರ್ಶಿ ವಿರುಪಾಕ್ಷಯ್ಯ ಸ್ವಾಮಿ ಅಂತರಗಂಗಿ, ಜಿಲ್ಲಾ ಉಪಾಧ್ಯಕ್ಷ ಬಿ.ಜಿ. ಅಂಜನೇಯ ವಡವಾಟಿ ಸೇರಿದಂತೆ ಮಾನ್ವಿ ಘಟಕದ ನೂತನ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### M. Pharm in Pharmacy Practice

M. Pharm in Pharmacy Practice ಎಂಬುದು 2 ವರ್ಷಗಳ ಸ್ನಾತಕೋತ್ತರ ಕೋರ್ಸ್ ಆಗಿದ್ದು, ಆಸ್ಪತ್ರೆ ಮತ್ತು ಕ್ಲಿನಿಕಲ್ ಸೆಟ್ಟಿಂಗ್‌ಗಳಲ್ಲಿ ರೋಗಿಗಳ ಆರೈಕೆಯಲ್ಲಿ ಔಷಧಗಳ ಬಳಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತದೆ, ರೋಗಿಗಳ ಔಷಧ ಚಿಕಿತ್ಸೆಯನ್ನು ಸುಧಾರಿಸಲು ಮತ್ತು ಸುರಕ್ಷಿತವಾಗಿ ನಿರ್ವಹಿಸಲು ಕ್ಲಿನಿಕಲ್ ಕೌಶಲ್ಯಗಳನ್ನು ಬೆಳೆಸುತ್ತದೆ, ಇದರಲ್ಲಿ ಥೆರಪಿ ಮೌಲ್ಯಮಾಪನ ಮತ್ತು ಫಾರ್ಮಕೋಥೆರಪಿಯಂತಹ ವಿಷಯಗಳು ಸೇರಿವೆ. ಪ್ರಸ್ತುತ ಯುಗದಲ್ಲಿ, ಆರೋಗ್ಯ ಸೇವೆಯ ಹೆಚ್ಚುತ್ತಿರುವ ಸಂಕೀರ್ಣತೆಗಳು ಮತ್ತು ಜಾಗತಿಕವಾಗಿ ರೋಗಿಗಳ ಸುರಕ್ಷತೆಯ ಮೇಲಿನ ಹೆಚ್ಚಿನ ಗಮನವು ಔಷಧಿ ಸಮನ್ವಯ, ರೋಗಿಯ ಸಮಾಲೋಚನೆ ಮತ್ತು ಔಷಧ ಜಾಗೃತಿಯಂತಹ ಕ್ಲಿನಿಕಲ್ ಅಭ್ಯಾಸ ಕ್ಷೇತ್ರಗಳಲ್ಲಿ ಪ್ರವೀಣ ಔಷಧಿಕಾರ–ರಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಸೃಷ್ಟಿಸಿದೆ. ಈ ಔಷಧಿಕಾರರು ಔಷಧಿ ಚಿಕಿತ್ಸೆಯನ್ನು ನಿರ್ವಹಿಸುವಲ್ಲಿ, ಸೂಕ್ತವಾದ ಔಷಧ ಬಳಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಮತ್ತು ಪ್ರತಿಕೂಲ ಪ್ರತಿಕ್ರಿಯೆಗಳ ಅಪಾಯವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ರೋಗಿಯ ಸಮಾಲೋಚನೆಯಲ್ಲಿ ಅವರ ಪರಿಣತಿಯು ಔಷಧಿಗಳ ಅನುಸರಣೆ ಮತ್ತು ತಿಳುವಳಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ, ಇದು ಉತ್ತಮ ಆರೋಗ್ಯ ಫಲಿತಾಂಶಗಳಿಗೆ ಕಾರಣವಾಗುತ್ತದೆ. ಹೆಚ್ಚುವ–ರಿಯಾಗಿ, ಔಷಧಿಕಾರರು ಇತರ ಆರೋಗ್ಯ ವೃತ್ತಿಪರರೊಂದಿಗೆ ಸಮಗ್ರ ಆರೈಕೆ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಸಹಕ–ರಿಸುತ್ತಾರೆ, ದೀರ್ಘಕಾಲದ ಮತ್ತು ತೀವ್ರ ಪರಿಸ್ಥಿತಿಗಳನ್ನು ಹೊಂದಿರುವ ರೋಗಿಗಳ ಬಹುಮುಖಿ ಅಗತ್ಯಗಳನ್ನು ಪರಿಹರಿಸುತ್ತಾರೆ. ಆರೋಗ್ಯ ವ್ಯವಸ್ಥೆಯ ವಿಕಸನಗೊಳ್ಳುತ್ತಿರುವ ಬೇಡಿಕೆಗಳನ್ನು ಪೂರೈಸಲು ಮತ್ತು ಒಟ್ಟಾರೆ ರೋಗಿಯ ಆರೈಕೆಯನ್ನು ಸುಧಾರಿಸಲು ಈ ಮುಂದುವ–ರಿದ ತರಬೇತಿ ಅತ್ಯಗತ್ಯ. ಈ ಕೋರ್ಸ್ ವಿಭಾಗಗಳು ಸಾಮಾನ್ಯವಾಗಿ ಇಂಟರ್ನ್‌ಶಿಪ್ ಮತ್ತು ಸಂಶೋಧನೆ (ಪ್ರಾಜೆಕ್ಟ್) ಒಳಗೊಂಡಿರುತ್ತವೆ, ಉದ್ಯೋಗಾವಕಾಶಗಳು ಆಸ್ಪತ್ರೆಗಳು, ಕ್ಲಿನಿಕ್‌ಗಳು, ಮತ್ತು ಔಷಧೀಯ ಕಂಪನಿಗಳಲ್ಲಿವೆ. ಕೋರ್ಸ್‌ನ ಉದ್ದೇಶ:ರೋಗಿಗಳ ಆರೈಕೆಯಲ್ಲಿ ಔಷಧಗಳ ಬಗ್ಗೆ ಜ್ಞಾನ ಮತ್ತು ಅನ್ವಯಿಸುವಿಕೆ.ಫಾರ್ಮಕೋಥೆರಪಿ, ರೋಗಿಗಳ ಆರೈಕೆ, ಮತ್ತು ಆರೋಗ್ಯ ಅರ್ಥಶಾಸ್ತ್ರದಲ್ಲಿ ಸುಧಾರಿತ ಜ್ಞಾನ. ಆಸ್ಪತ್ರೆಗಳಲ್ಲಿ ಸುರಕ್ಷಿತ ಮತ್ತು ಪರಿಣಾಮಕಾರಿ ಔಷಧ ಬಳಕೆಯನ್ನು ಖಚಿತಪಡಿಸುವುದು. ಕೋರ್ಸ್‌ನ ವಿಷಯಗಳು:ಕ್ಲಿನಿಕಲ್ ಫಾರ್ಮಸಿ ಮತ್ತು ಫಾರ್ಮಕೋಥೆರಪಿ.ರೋಗಿಗಳ ಆರೈಕೆಯಲ್ಲಿ ಔಷಧಗಳ ವಿತರಣೆಮತ್ತು ಪರಿಣಾಮಗಳು.ಆರೋಗ್ಯ ರಕ್ಷಣಾ ತಂಡದ ಭಾಗವಾಗಿ ಕಾರ್ಯನಿರ್ವಹಿಸುವುದು. ಕೋರ್ಸ್‌ನ ರಚನೆ:ಸಾಮಾನ್ಯವಾಗಿ 2 ವರ್ಷಗಳ ಅವಧಿ.ಸಿದ್ಧಾಂತ ಮತ್ತು ಪ್ರಾಯೋಗಿಕ ಭಾಗಗಳನ್ನು ಒಳಗೊಂಡಿರುತ್ತದೆ.ಅವಧಿ ಮುಗಿದ ನಂತರ ವರದಿ ಮತ್ತು ಮೌಲ್ಯಮಾಪನಕ್ಕಾಗಿ ಪ್ರಸ್ತುತಿ. ಉದ್ಯೋಗಾವಕಾಶಗಳು:ಆಸ ್ಪತ್ರೆಗಳು: ಕ್ಲಿನಿಕಲ್ ಫಾರ್ಮಸಿ, ಔಷಧ ವಿಭಾಗ.ಸಮುದಾಯ ಔಷಧಾಲಯಗಳು.ಔಷಧೀಯ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳು. ಹೆಚ್ಚಿನ ಅಧ್ಯಯನ: ಖು.ಆ.. ಅರ್ಹತೆ:಼.ಖುಚಿಡಿಟ ಪದವಿ ಹೊಂದಿರಬೇಕು. ಒಟ್ಟಾರೆಯಾಗಿ, ಈ ಕೋರ್ಸ್ ಔಷಧಿಕಾರರನ್ನು ಕ್ಲಿನಿಕಲ್ ಸೆಟ್ಟಿಂಗ್‌ಗಳಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಸಿದ್ಧಪಡಿಸುತ್ತದೆ.

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಭೇಟಿ

■ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಕ್ಷ ಸಂಘಟನೆ ಬಲಪಡಿಸುವ ಕುರಿತು ರಾಜ್ಯ ಬಿಜೆಪಿ ಅಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರನ್ನು ದೇವರ ಹಿಪ್ಪರಗಿ ಮತಕ್ಷೇತ್ರ ಬಿಜೆಪಿ ಮುಖಂಡ ಬಸನಗೌಡ ಎಸ್. ಪಾಟೀಲ (ಯಡಿಯಾಪುರ)ಬಿ. ಸಾಲವಾಡಗಿ ಹಾಗೂ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮತ್ತು ಹಾಲಿ ನಿರ್ದೇಶಕರಾದ ಸುರೇಶ್ ಸಜ್ಜನ ಅವರು ಶನಿವಾರ ಬೆಂಗಳೂರಿನಲ್ಲಿ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ದೇವರಹಿಪ್ಪರಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಸಂಘಟನೆ ಮತ್ತು ಬಲವರ್ಧನೆಯ ಅಗತ್ಯತೆ, ಕಾರ್ಯಕರ್ತರ ಸಕ್ರಿಯತೆ, ಬೂತ್ ಮಟ್ಟದ ಸಂಘಟನೆ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ತಂತ್ರ, ರೂಪ ರೇಷೆ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು.ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸವಾಗಬೇಕು ಹಾಗೂ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಇನ್ನಷ್ಟೂ ಬಲಿಷ್ಠವಾಗುವಂತೆ ಮಾಡಲು ಸೂಕ್ತ ಮಾರ್ಗದರ್ಶನ ನೀಡುವಂತೆ ರಾಜ್ಯಾಧ್ಯಕ್ಷರಿಗೆ ಮನವಿಮಾಡ ಲಾಯಿತು. ಈ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ದೇವರಹಿಪ್ಪರಗಿ ಕ್ಷೇತ್ರದ ಸಂಘಟನೆಗೆ ಅಗತ್ಯ ಬೆಂಬಲ ನೀಡುವುದಾಗಿ ತಿಳಿಸಿ ಇನ್ನೂ ಹೆಚ್ಚು ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡಿ ಎಂದು ತಿಳಿಸಿದರು. ಮುಖಂಡ ಬಸನಗೌಡ ಪಾಟೀಲ ಯಡಿಯಾಪುರ ಅವರ ಈ ಭೇಟಿ ದೇವರಹಿಪ್ಪರಗಿ ಮತಕ್ಷೇತ್ರದಲ್ಲಿ ಬಿಜೆಪಿಯ ಸಂಘಟನಾ ಚಟುವಟಿ–ಕೆಗಳಿಗೆ ಹೊಸ ಚೈತನ್ಯ ನೀಡಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.



# ರಾಷ್ಟ್ರೀಯ ಮಟ್ಟದ NCC ಶಿಬಿರದಲ್ಲಿ ಉತ್ತರ ಕನ್ನಡಕ್ಕೆ ಕೀರ್ತಿ ತಂದ SDM ವಿದ್ಯಾರ್ಥಿನಿ ಶ್ರೀನಿಕಾ ಅಂಬಿಗ




■ ನೈಜ್ಯ ದೆಸೆ ನ್ಯೂಸ್

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಎಸ್.ಡಿ.ಎಂ. ಪದವಿ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಶ್ರೀನಿಕಾ ಎಸ್. ಅಂಬಿಗ ಅವರು ರಾಷ್ಟ್ರೀಯ ಮಟ್ಟದ ಎನ್.ಸಿ.ಸಿ. ತರಬೇತಿ ಶಿಬಿರದಲ್ಲಿ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿ ಜಿಲ್ಲೆಯ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.ಕೇರಳ ರಾಜ್ಯದ ಎಝಿಮಲಾದಲ್ಲಿರುವ ಭಾರತೀಯ ನೌಕಾ ಅಕಾಡೆಮಿಯಲ್ಲಿ ದಿನಾಂಕ ಡಿಸೆಂಬರ್ 15 ರಿಂದ 26ರವರೆಗೆ ಆಯೋಜಿಸಲಾದ ಅಖಿಲ ಭಾರತ ವಾರ್ಷಿಕ ತರಬೇತಿ ಶಿಬಿರದಲ್ಲಿ ರಾಷ್ಟ್ರದ ವಿವಿಧ ರಾಜ್ಯಗಳಿಂದ ಆಯ್ಕೆಯಾದ ಸುಮಾರು 300 ಓಅಅ ಕೆಡೆಟ್‌ಗಳು ಭಾಗವಹಿಸಿದ್ದರು.ಉತ್ತರ ಕನ್ನಡ ಜಿಲ್ಲೆಯಿಂದ ಆಯ್ಕೆಯಾದ ಕೇವಲ 4 ಓಅಅ ವಿದ್ಯಾರ್ಥಿಗಳಲ್ಲಿ ಕುಮಾರಿ ಶ್ರೀನಿಕಾ ಅಂಬಿಗ ಒಬ್ಬರಾಗಿದ್ದು ವಿಶೇಷ. ಕರ್ನಾಟಕ ಗೋವಾ ಡೈರೆಕ್ಟರೇಟ್‌ನಿಂದ ಒಟ್ಟು 26 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.ಶಿಬಿರದ ಮುಖ್ಯ ಉದ್ದೇಶ ವಿವಿಧ ರಾಜ್ಯಗಳ ಸಂಸ್ಕೃತಿಗಳ ವಿನಿಮಯದ ಮೂಲಕ ಪರಸ್ಪರ ಅರಿವು ವೃದ್ಧಿಸುವುದಾಗಿದ್ದು, ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶಭಕ್ತಿ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವುದು ಆಗಿದೆ.ಈ ಶಿಬಿರದಲ್ಲಿ ಬೋಟ್ ಪುಲ್ಲಿಂಗ್, ಬೋಟ್ ರಿಗ್ಗಿಂಗ್, ಫೈರಿಂಗ್, ಸೆಮಾಫೋರ್, ಡ್ರಿಲ್, ಕಲ್ಚರಲ್ ಸಾಂಗ್ ಮತ್ತು ಡ್ಯಾನ್ಸ್ ಸೇರಿದಂತೆ ಹಲವು ತರಬೇತಿ ಹಾಗೂ ಸ್ಪರ್ಧಾತ್ಮಕ ಕಾರ್ಯಕ್ರಮಗಳು ನಡೆದವು.ಎನ್.ಸಿ.ಸಿ.ಯು ಸೇನೆ, ನೌಕಾಪಡೆ ಮತ್ತು ವಾಯುಪಡೆಯನ್ನು ಒಳಗೊಂಡ ಸಂಸ್ಥೆಯಾಗಿದ್ದು, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮೂಲಭೂತ ಸೈನಿಕ ತರಬೇತಿ ಮತ್ತು ಸಾಹಸ ಚಟುವಟಿಕೆಗಳನ್ನು ಒದಗಿಸುತ್ತದೆ.ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್ ಕೂಡ!ಹೊನ್ನಾವರ ತಾಲ್ಲೂಕಿನ ಮೊಳ್ಕೋಡ್ ಗ್ರಾಮದ ಶ್ರೀ ಶ್ರೀಧರ್ ಅಂಬಿಗ ಹಾಗೂ ಶ್ರೀಮತಿ ಸುಮಿತ್ರಾ ಅಂಬಿಗ ಇವರ ಪುತ್ರಿಯಾದ ಶ್ರೀನಿಕಾ ಅಂಬಿಗ ಅವರು ಪಠ್ಯ ಹಾಗೂ ಪಠ್ಯೇತರ ಚಟುವಟಿ–ಕೆಗಳಲ್ಲಿಯೂ ಸಕ್ರಿಯರಾಗಿದ್ದಾರೆ.ನವೆಂಬರ್ 11, 2025ರಂದು ಹೊನ್ನಾವರದಲ್ಲಿ ನಡೆದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ 18+ ವಿಭಾಗದಲ್ಲಿ ಕುಮಿತೆಯಲ್ಲಿ ಪ್ರಥಮ ಸ್ಥಾನ ಹಾಗೂ ಕಥಾ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇವ–ರಿಗೆ ಕರಾಟೆ ತರಬೇತುದಾರರಾದ ಪ್ರಭಾಕರ್ ಗೌಡ ತರಬೇತಿ ನೀಡಿದ್ದರು.ಶ್ರೀನಿಕಾ ಅಂಬಿಗ ಅವರ ಎನ್.ಸಿ.ಸಿ. ಹಾಗೂ ಇತರ ಸಾಧನೆಗಳನ್ನು ಗಮನಿಸಿ, ಅವರಿಗೆ ತರಬೇತಿ ನೀಡಿದ ಲೆಫ್ಟಿನೆಂಟ್ ಸಂತೋಷ್ ಗುಡಿಗಾರ್ (ಅಸೋಸಿಯೇಟ್ ಎನ್.ಸಿ.ಸಿ. ಅಧಿಕಾರಿ), ಕಾಲೇಜಿನ ಪ್ರಾಧ್ಯಾಪಕರಾದ ಡಿ.ಎಲ್. ಹೆಬ್ಬಾರ್, ಪ್ರಾಂಶುಪಾಲರಾದ ಜಿ.ಎಸ್. ಭಟ್, ಶಿಕ್ಷಕ ವೃಂದ ಹಾಗೂ ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.

# ಟಿಪ್ಪರ್ ಡಿಕ್ಕಿಯಾಗಿ ಟ್ರಾಕ್ಟರ್ ಪಲ್ಟಿ; ಹತ್ತಿ ಮಾರಲು ಹೋಗಿದ್ದ ರೈತ ದುರ್ಮರಣ





■ ನೈಜ್ಯ ದೆಸೆ ನ್ಯೂಸ್

ರಾಯಚೂರು ನಗರದ ಹೊರವಲಯದ ಬೈಪಾಸ್ ರಸ್ತೆಯಲ್ಲಿ ಇಂದು ಮರಳು ತುಂಬಿದ ಟಿಪ್ಪರ್ ಹಾಗೂ ಟ್ರಾಕ್ಟರ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಹತ್ತಿ ಚೀಲಗಳನ್ನು ಹೇರಿಕೊಂಡು ಹೋಗುತ್ತಿದ್ದ ಟ್ರಾಕ್ಟರ್‌ಗೆ ಹಿಂಬದಿಯಿಂದ ವೇಗವಾಗಿ ಬಂದ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ.ಟ್ರಾಕ್ಟರ್ ಪಲ್ಟಿ: ರೈತ ದುರ್ಮರಣ ಛಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಟ್ರಾಕ್ಟರ್ ರಸ್ತೆಯಲ್ಲೇ ಪಲ್ಟಿಯಾಗಿದೆ. ಈ ವೇಳೆ ಟ್ರಾಕ್ಟರ್ ಮೇಲೆ ಕುಳಿತಿದ್ದ ರೈತ ನಾಗರಾಜ್ (50) ಅವರು ಟ್ರಾಕ್ಟರ್ ಕೆಳಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಟ್ರಾಕ್ಟರ್ ಚಾಲಕ ಬಸವರಾಜ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹತ್ತಿ ಮಾರಲು ಹೋಗುತ್ತಿದ್ದಾಗ ನಡೆದ ದುರಂತ! ಮೃತ ರೈತ ನಾಗರಾಜ್ ಮಾನ್ವಿ ತಾಲ್ಲೂಕಿನ ಗೋರ್ಕಲ್ ಗ್ರಾಮದವರಾಗಿದ್ದಾರೆ. ತಾವು ಬೆಳೆದ ಹತ್ತಿಯನ್ನು ಮಾರಾಟ ಮಾಡಲು ಟ್ರಾಕ್ಟರ್‌ನಲ್ಲಿ ಲೋಡ್ ಮಾಡಿಕೊಂಡು ರಾಯಚೂರಿನ ಮಿಲ್‌ಗೆ ತರುತ್ತಿದ್ದಾಗ ಈ ಘಟನೆ ನಡೆದಿದೆ. ಕಷ್ಟಪಟ್ಟು ಬೆಳೆದ ಬೆಳೆ ಕೈಸೇರುವ ಮುನ್ನವೇ ರೈತ ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಕ್ಕೆ ಸಚಿವ ಬೋಸರಾಜು ಭೇಟಿ ಅಪಘಾತ ನಡೆದ ಸಮಯದಲ್ಲಿ ಇದೇ ಮಾರ್ಗವಾಗಿ ಸಂಚರಿಸುತ್ತಿದ್ದ ಸಚಿವ ಎನ್‌ಎಸ್ ಬೋಸರಾಜು ಅವರು ತಕ್ಷಣ ವಾಹನ ನಿಲ್ಲಿಸಿ ಸ್ಥಳಕ್ಕೆ ಭೇಟಿ ನೀಡಿದರು. ಮೃತ ರೈತನ ಕುಟುಂಬದವ–ರಿಗೆ ಸಾಂತ್ವನ ಹೇಳಿದ ಅವರು, ಘಟನೆ ಕುರಿತು ಮಾಹಿತಿ ಪಡೆದು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಟಿಪ್ಪರ್ ಚಾಲಕ ಪರಾರಿ, ಕೇಸ್ ದಾಖಲು ಅಪಘಾತ ಸಂಭವಿಸುತ್ತಿದ್ದಂತೆಯೇ ಟಿಪ್ಪರ್ ಚಾಲಕ ವಾಹನ ಬಿಟ್ಟು ಸ್ಥಳದಿಂದ ಪರಾರಿಯಾಗಿದ್ದಾನೆ. ಸದ್ಯ ರಾಯಚೂ–ರಿನ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಟಿಪ್ಪರ್ ವಶಕ್ಕೆ ಪಡೆದು ಚಾಲಕನಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.


# ತಾಳಿಕೋಟಿ: ಬೀದಿ ಬದಿ ವ್ಯಾಪಾರಿಗಳ ದಿನಾಚರಣೆ

■ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಕರ್ನಾಟಕ ಪ್ರದೇಶ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟ(ರಿ) ಇದರ ತಾಲೂಕಾ ಶಾಖೆಯ ವತಿಯಿಂದ ಬೀದಿ ಬದಿ ವ್ಯಾಪಾ–ರಿಗಳ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ರವಿವಾರ ಪಟ್ಟಣದ ಪುರಸಭೆ ಹಳೆ ಕಾರ್ಯಾಲಯ ಆವರಣದಲ್ಲಿ ಹಮ್ಮಿಕೊಂಡ ದಿನಾಚರಣೆಯ ಕಾರ್ಯಕ್ರಮವನ್ನು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೆಹಬೂಬ ಕುಳಗೇರಿ ಮಾತನಾಡಿ ಕಳೆದ ಎರಡು ವರ್ಷಗಳಿಂದ ಪಟ್ಟಣದಲ್ಲಿ ಈ ದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಾ ಬರಲಾಗಿದೆ ಇಲ್ಲಿಯ ಶಾಖೆಯ ಪದಾಧಿಕಾ–ರಿಗಳು ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಅವರನ್ನು ಅಭಿನಂದಿಸುತ್ತೇನೆ. ಸರ್ಕಾರ ನಮಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಅದರ ಸದುಪಯೋಗ ಮಾಡಿಕೊಳ್ಳಬೇಕು ಕ್ಷೇತ್ರದ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡು ಬೀದಿಬದಿ ವ್ಯಾಪಾರಿಗಳ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದರು. ತಾಲೂಕ ಶಾಖೆಯ ಅಧ್ಯಕ್ಷ ಜುಮ್ಮಣ್ಣ ನಾಲತವಾಡ ಅವರು ಮಾತನಾಡಿ ಬೀದಿ ಬದಿ ವ್ಯಾಪಾರಿಗಳ ಹಲವಾರು ಸಮಸ್ಯೆಗಳಿವೆ ಇವುಗಳ ಪರಿಹಾರಕ್ಕೆ ಕ್ಷೇತ್ರದ ಶಾಸಕರು ನಮ್ಮೊಂದಿಗೆ ಸಹಕರಿಸಬೇಕು. ನಾವೆಲ್ಲರೂ ಸಂಘಟನೆಯ ಬಲವರ್ಧನೆಗೆ ಹೆಚ್ಚು ಆಸಕ್ತಿ ವಹಿಸಬೇಕಾಗಿದೆ, ಸವಲತ್ತುಗಳನ್ನು ಪಡೆಯಲು ಸಂಘಟನೆ ಅಗತ್ಯವಾಗಿದೆ ಎಂದರು. ಒಕ್ಕೂಟದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಡೇಸಾಬ ಅ.ಚೌಧರಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕ ಉಪಾಧ್ಯಕ್ಷ ಅಬ್ದುಲ್ ಲತೀಫ ಬೀಳಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಖೆಯ ಸಾಮಾಜಿಕ ಜಾಲತಾಣದ ಮುಖ್ಯಸ್ಥ ನಜೀರ ಅಹ್ಮದ್ ಚೋರಗಸ್ತಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಆಸೀಫ ಕೆಂಭಾವಿ, ದಲಿತ ಸೇನೆ ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿಮನಿ, ಜಿಲ್ಲಾ ಉಪಾಧ್ಯಕ್ಷ ಬಸ್ಸು ಮಾದರ, ಪದಾಧಿಕಾರಿಗಳಾದ ನಬಿಸಾಬ ಜಾಲಿಬೆಂಚಿ, ಮಹಮ್ಮದ್ ರಫೀಕ ಚೌದ್ರಿ,ಬಿ.ಎ.ಚೌಧ–ರಿ,ಅಕ್ಬರಸಾಬ ಕೂಡಗಿ, ನಾನೇಶ್ವರ ಹಿಂಗ ಮೋರೆ, ಸಂತೋಷ್ ಇಲ್ಕಲ್,ಸೂಶಿಲಾಬಾಯಿ ಭಜಂತ್ರಿ,–ಅಂಬೂಬಾಯಿ ಭಂಡಾರಿ, ದುರ್ಗಾಬಾಯಿ ಹಿಂಗಮೋರೆ,ಗಂಗೂಬಾಯಿ ಹಿಂಗಮೋರೆ, ಚನ್ನೂಬಾಯಿ ಬಿಜಾಪುರ,ಮಾನಪ್ಪ ಕಟ್ಟಿಮನಿ, ಹುಸೇನ ಚಾಂದಕೋಟೆ, ಹಸನಸಾಬ ಚೌದ್ರಿ, ಮಕ್ತೂಮಸಾಬ ಬಳಗಾನೂರ,ಮಲಕಾಜಿ ನೆಲ್ಲಗಿ, ಹುಸೇನಸಾಬ ನಾಲತವಾಡ,ಖಾಜಾಅಮೀನ ಹಳ್ಳೂರ,ದಾವಲಸಾಬ ಬಳಗಾನೂರ,ಬುರಾನಸಾಬ ಜಮಾದಾರ ಮತ್ತಿತರರು ಇದ್ದರು.




## ಅಯ್ಯಪ್ಪಾ ಸ್ವಾಮಿಯ ಸನ್ನಿಧಿಯಲ್ಲಿ 2028ಕ್ಕೆ RVN ಶಾಸಕನಾಗಲಿಯೆಂದು ಹರಕೆ ಹೊತ್ತ ವೆಂಕಟಪ್ಪನ ಭಕ್ತ



■ ನೈಜ್ಯ ದೆಸೆ ನ್ಯೂಸ್

ಶಬರಿಮಲೆ ಅಯ್ಯಪ್ಪ ಸ್ವಾಮಿಯ ಪಾವನ ಸನ್ನಿಧಾನದಲ್ಲಿ ಭಕ್ತಿಯ ಜೊತೆಗೆ ಮನದಾಳದ ಹಾರೈಕೆ ವ್ಯಕ್ತವಾದ ಅಪರೂಪದ ಕ್ಷಣವೊಂದು ಸಾಕ್ಷಿಯಾಯಿತು. ಮಾನ್ವಿ ತಾಲೂಕಿನ ಜೀನೂರು ಕ್ಯಾಂಪ್‌ನ ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರೂ, ನಿಕಟಪೂರ್ವ ಶಾಸಕರಾದ ಶ್ರೀ ರಾಜಾ ವೆಂಕಟಪ್ಪ ನಾಯಕ ದೊರೆ ಅವರ ಹೃದಯಪೂರ್ವಕ ಅಭಿಮಾನಿಯಾದ ದೇವರಾಜ ನಾಯಕ (ಬೆಟ್ಟಪ್ಪ) ಅವರು ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿ ಕಠಿಣ ವ್ರತವನ್ನು ಆಚರಿಸಿ ಶಬ–ರಿಮಲೆ ದರ್ಶನ ಪಡೆದರು.ಆ ಪಾವನ ಕ್ಷಣದಲ್ಲಿ, "ನಮ್ಮ ನಾಯಕ ಮತ್ತೆ ಜನರ ಸೇವೆಗೆ ಬರಲಿ" ಎಂಬ ಅಂತರಂಗದ ಪ್ರಾರ್ಥನೆಯೊಂದಿಗೆ, ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ಶ್ರೀ ರಾಜಾ ವೆಂಕಟಪ್ಪ ನಾಯಕ ದೊರೆ ಅವರ ಭಾವಚಿತ್ರವನ್ನು ಅಯ್ಯಪ್ಪ ಸ್ವಾಮಿಯ ಸನ್ನಿಧಾನದಲ್ಲಿ ಹಿಡಿದು ನಿಂತು ಕಣ್ಣೀರೊಳಗೊಂಡ ಭಕ್ತಿಯಿಂದ ಹಾರೈಸಿದರು. 2028ರಲ್ಲಿ ಮತ್ತೆ ಶಾಸಕರಾಗಿ ಆಯ್ಕೆಯಾಗಿ ಜನಸೇವೆ ಮುಂದುವ–ರಿಸುವ ಶಕ್ತಿ, ಆಶೀರ್ವಾದ ದೊರೆಯಲಿ ಎಂಬ ನಂಬಿಕೆಯನ್ನು ದೇವರ ಚರಣಗಳಲ್ಲಿ ಸಮರ್ಪಿಸಿದ ಆ ಕ್ಷಣ, ನಂಬಿಕೆ ಮತ್ತು ಭಾವನೆಯ ಶಕ್ತಿಯನ್ನು ಪ್ರತಿಬಿಂಬಿಸಿದ ಹೃದಯಸ್ಪರ್ಶಿ ದೃಶ್ಯವಾಗಿತ್ತು.




' ಮಾನ್ವಿ ತಾಲೂಕಿನ ಇತಿಹಾಸದಲ್ಲಿ ಸರ್ವ ಶ್ರೇಷ್ಠ ಹಾಗೂ ನಿಷ್ಠಾವಂತ ಜನಸೇವೆ ಮಾಡಿದಂತಹ , ಮಾನ್ವಿ ತಾಲೂಕಿನ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದ ಏಕೈಕ ಶಾಸಕ ರಾಜ ವೆಂಕಟಪ್ಪ ನಾಯಕ
'ಖಾಜಾ ಪಾಷಾ ಬ್ಯಾಗವಾಟ್

# ರಾಯಚೂರು ಜಿಲ್ಲಾ ಉತ್ಸವ 2026: ಕವಿಗೋಷ್ಠಿಗೆ ಕವಿತೆಗಳ ಆಹ್ವಾನ

■ ನೈಜ್ಯ ದೆಸೆ ನ್ಯೂಸ್

ರಾಯಚೂರು, ಜನವರಿ 10 (ಕರ್ನಾಟಕ ವಾರ್ತೆ):2026ರ ಜನವರಿ 29, 30 ಹಾಗೂ 31ರಂದು ರಾಯಚೂರಿನಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಕವಿಗೋಷ್ಠಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ಕವಿಗಳಿಂದ ಸ್ವರಚಿತ ಕವಿತೆಗಳನ್ನು ಆಹ್ವಾನಿಸಲಾಗಿದೆ.ಕವಿತೆಗಳು ಸಂಪೂರ್ಣವಾಗಿ ಸ್ವತಂತ್ರ ರಚನೆಯಾಗಿರಬೇಕು. ಒಂದು ಪುಟವನ್ನು ಮೀರದಂತೆ ನುಡಿ ಅಥವಾ ಯುನಿಕೋಡ್‌ನಲ್ಲಿ ಟೈಪ್ ಮಾಡಿ ವರ್ಡ್ ಫಾರ್ಮೇಟಿನಲ್ಲಿ ಜನವರಿ 14ರೊಳಗೆ ಕಳುಹಿಸಬೇಕು.ಕವಿತೆಗಳನ್ನು ಈ ಕೆಳಗಿನ ಮಾರ್ಗಗಳ ಮೂಲಕ ಸಲ್ಲಿಸಬಹುದು: ಇ–ಮೇಲ್: ಡಿಚಿಥಿಣಡಿಜುರಿಡಿ@ರಟಚುಟ.ಛಿಂಟ–ಅಂಚೆ ಮೂಲಕ:ಹಿರಿಯ ಸಹಾಯಕ ನಿರ್ದೇಶಕರ ಕಚೇರಿ,ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,ಪತ್ರಿಕಾ ಭವನದ ಮೊದಲನೇ ಮಹಡಿ,ಶ್ರೀ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರದ ಹಿಂಭಾಗ,ರೈಲ್ವೆ ನಿಲ್ದಾಣ ರಸ್ತೆ,ರಾಯಚೂರು ರಾಯಚೂರು ಜಿಲ್ಲೆವಾಟ್ಸಪ್ ಮೂಲಕ: 9916111356 ಅಥವಾ 9008462236ಕವಿತೆಯೊಂದಿಗೆ ಕಡ್ಡಾಯವಾಗಿ ಕವಿಯ ಹೆಸರು, ಸ್ಥಳ, ವಿದ್ಯಾರ್ಹತೆ, ದೂರವಾಣಿ ಸಂಖ್ಯೆ, ಹಾಗೂ ವಯಸ್ಸಿನ ದೃಢೀಕರಣ–ಕ್ಕಾಗಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿಯ ಪ್ರತಿಯೊಂದಿಗೆ ವಿಳಾಸದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ ಝೆರಾಕ್ಸ್ ಪ್ರತಿಯನ್ನು ಸಲ್ಲಿಸಬೇಕು.ಕವಿಗಳ ಆಯ್ಕೆ ಆಯ್ಕೆ ಸಮಿತಿಯ ತೀರ್ಮಾನದ ಮೇರೆಗೆ ನಡೆಯಲಿದ್ದು, ಸಮಿತಿಯತೀರ್ಮಾನವೇ ಅಂತಿಮವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬಂದ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.




OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101